ಶ್ರೀ ಕೆ. ಎಸ್. ಈಶ್ವರಪ್ಪ : ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಏನು point of order ಪ್ರಸ್ತಾಪ ಮಾಡಿದರು. ಸದನ ನಡೆಯುವ ಸಂದರ್ಭದಲ್ಲಿ ಯಾವುದೇ policy decision ಬಗ್ಗೆ ಸರ್ಕಾರ ಯಾವುದೇ ನಿರ್ಣಯವನ್ನು ಕೈಗೊಂಡ ಸಂದರ್ಭದಲ್ಲಿ ಅದನ್ನು ಸದನದ ಹೊರಗಡೆ ಹೇಳದೇ ಸದನ ನಡೆಯುವ ಸಂದರ್ಭದಲ್ಲಿ ಸದನದಲ್ಲಿಯೇ ಅದನ್ನು ಪ್ರಕಟ ಮಾಡಬೇಕೆನ್ನುವುಂಥದ್ದೇನಿದೆ, ಅದು ಹಿಂದೆ ಎಲ್ಲ ಕಡೆ ನಡೆದುಕೊಂಡು ಬಂದಿದೆ. ಅದರ ಬಗ್ಗೆ ಎರಡು ಪ್ರಶ್ನೆ ಇಲ್ಲ. Particularly, ಮಾನ್ಯ ವಿರೋಧ ಪಕ್ಷದ ನಾಯಕರು, ವಿದ್ಯುತ್ ಖರೀದಿ ಬಗ್ಗೆ ಛತ್ತೀಸ್‌ಗಡದ ಮುಖ್ಯಮಂತ್ರಿಯವರಾದ ರಮಣಸಿಂಗ್‌ರವರ ಜೊತೆ ಮಾನ್ಯ ಮುಖ್ಯಮಂತ್ರಿಗಳು, ತಾವು ಮಾತುಕತೆ ಮಾಡಿದ ಬಗ್ಗೆ ಮತ್ತು ಇನ್ನಿತರ plant ಅನ್ನು ಅಲ್ಲಿ ಹೊಸದಾಗಿ ಹಾಕುವ ಬಗ್ಗೆ ಇರಬಹುದು, ಇದರ ಬಗ್ಗೆ ತಾವು ಈಗಾಗಲೇ ನಿರ್ಣಯವನ್ನು ಕೈಗೊಂಡಿದ್ದೀರಿ, ಆ ರೀತಿ ಪತ್ರಿಕೆಯಲ್ಲಿ ಬಂದಿದೆ ಎನ್ನುವ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಆದರೆ, ಮಾನ್ಯ ಮುಖ್ಯಮಂತ್ರಿಗಳು, ಇಂಧನ ಸಚಿವರಾದ ಈಶ್ವರಪ್ಪನವರು ಮಾತನಾಡುತ್ತಾ, ಆ ರೀತಿ ನಾವು ನಿರ್ಣಯವನ್ನು ಕೈಗೊಂಡಿಲ್ಲ, ಅದರ ಬಗ್ಗೆ ಚರ್ಚೆ ನಡೆಯುತ್ತಿದೆ, ಅಧಿಕಾರಿಗಳು ಅಲ್ಲಿಗೆ ಹೋಗಿದ್ದಾರೆ ಎಂದು ಈ ರೀತಿ ಹೇಳಿದರು. ಅಂದರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ, ಇನ್ನೂ ನಾವು ಯಾವುದೇ ರೀತಿಯ policy decision ತೆಗೆದುಕೊಂಡಿಲ್ಲವೆನ್ನುವ ಮಾತನ್ನು ಸರ್ಕಾರದ ಪರವಾಗಿ ಹೇಳಿದ್ದಾರೆ. ಹೀಗಾಗಿ, ಇವತ್ತು ಪತ್ರಿಕೆಯಲ್ಲಿ ಬಂದದ್ದು ಸರಿ ಇಲ್ಲವೆಂದೂ ಸರ್ಕಾರದ ಪರವಾಗಿ ಹೇಳಿದ್ದಾರೆ. ಈ policy decision ಪ್ರಕಟವಾಗಿಲ್ಲವೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಮುಂದೆ ಬರುವ ದಿವಸಗಳಲ್ಲಿ ಯಾವುದೇ ರೀತಿಯಾದಂಥ policy decision ತೆಗೆದುಕೊಳ್ಳುವ ಸಂದರ್ಭದಲ್ಲಿ ಸದನ ನಡೆಯುವ ಸಂದರ್ಭದಲ್ಲಿ ಅದನ್ನು ಸದನದಲ್ಲಿಯೇ ಪ್ರಕಟ ಮಾಡುವಂಥದ್ದಾಗಲಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು 23 ನೇ ತಾರೀಖಿಗೆ ಎಲ್ಲ ಪ್ರತಿಪಕ್ಷದ ನಾಯಕರ ಸಭೆಯನ್ನೂ ಕರೆದಿದ್ದಾರೆ. ಅದರಲ್ಲಿ ಇದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಬಹುದು ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

12-30 pm

3. ಈಗ ಗಮನ ಸೆಳೆಯುವ ಸೂಚನೆಗಳು.

ವಿಷಯ : ಚಿಕ್ಕಬಳ್ಳಾಪುರ ಜಿಲ್ಲೆಯ ಭಾಗಗಳಲ್ಲಿ ವಿದ್ಯುತ್ ಸರಬರಾಜಿನ ಅವ್ಯವಸ್ಥೆಯಿಂದ ವ್ಯವಸಾಯ ಹಾಗೂ ರೇಷ್ಮೆ ಕೈಗಾರಿಕಾ ಉದ್ದಿಮೆಗಳಿಗೆ ವಿದ್ಯುತ್ ಅಭಾವದಿಂದ ಉಂಟಾಗಿರುವ ತೊಂದರೆ ಬಗ್ಗೆ.

ಶ್ರೀ ಎ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆಯ ಭಾಗಗಳಲ್ಲಿ ವಿದ್ಯುತ್ ಸರಬರಾಜಿನ ಅವ್ಯವಸ್ಥೆಯಿಂದ ವ್ಯವಸಾಯ ಹಾಗೂ ರೇಷ್ಮೆ ಕೈಗಾರಿಕಾ ಉದ್ದಿಮೆಗಳಿಗೆ ವಿದ್ಯುತ್ ಅಭಾವದಿಂದ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ಇಂಧನ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ (ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೇ, ಚಿಕ್ಕಬಳ್ಳಾಪುರ ಜಿಲ್ಲೆಯು ಬೆಂಗಳೂರು ಗ್ರಾಮೀಣ ಕ್ಷೇತ್ರ ವಲಯದ ಕೋಲಾರ ವೃತ್ತದ ವ್ಯಾಪ್ತಿಗೆ ಒಳಪಡುತ್ತದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ಭಾಗಗಳಿಗೆ 220 ಕೆ.ವಿ. ಸಾಮರ್ಥ್ಯದ ಚಿಂತಾಮಣಿ, ದೊಡ್ಡಬಳ್ಳಾಪುರ ಹಾಗೂ ಗೌರಿಬಿದನೂರು ವಿದ್ಯುತ್ ಸ್ವೀಕರಣ ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುತ್ತದೆ. ಈ 3 ವಿದ್ಯುತ್ ಸ್ವೀಕರಣ ಕೇಂದ್ರಗಳಿಂದ, 66/11 ಕೆ.ವಿ.ಯ 22 ವಿದ್ಯುತ್ ಉಪಕೇಂದ್ರಗಳ ಮೂಲಕ ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ಭಾಗಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಅತಿ ಹೆಚ್ಚು ರೇಷ್ಮೆ ಕೈಗಾರಿಕಾ ಉದ್ದಿಮೆಗಳಿವೆ. ಶಿಡ್ಲಘಟ್ಟ ತಾಲ್ಲೂಕಿನಲ್ಲಿ 66/11 ಕೆ.ವಿ. ಯ ಒಂದು ಉಪಕೇಂದ್ರವಿದ್ದು, ಈ ಉಪಕೇಂದ್ರಕ್ಕೆ ಚಿಂತಾಮಣಿಯ 220 ಕೆ.ವಿ. ವಿದ್ಯುತ್ ಸ್ವೀಕರಣ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದೆ. ಚಿಂತಾಮಣಿಯ 220 ಕೆ.ವಿ. ವಿದ್ಯುತ್ ಸ್ವೀಕರಣ ಕೇಂದ್ರಕ್ಕೆ ಒಟ್ಟು 110 ಮೆಗಾ ವ್ಯಾಟ್ ವಿದ್ಯುತ್ ಅಗತ್ಯವಿದ್ದು, ವಿದ್ಯುತ್ ಅಭಾವದ ಕಾರಣ ಪ್ರಸ್ತುತ ಬೇಡಿಕೆಯ ಪ್ರಮಾಣವನ್ನು ಕೇವಲ 35 ಮೆಗಾ ವ್ಯಾಟ್‌ಗೆ ಸೀಮಿತಗೊಳಿಸಲಾಗಿದೆ. ಈ 35 ಮೆಗಾ ವ್ಯಾಟ್ ವಿದ್ಯುತ್ತನ್ನು ಶಿಡ್ಲಘಟ್ಟ, ಶ್ರೀನಿವಾಸಪುರ, ಚಿಂತಾಮಣಿ ತಾಲ್ಲೂಕುಗಳಿಗೆ ಹಂಚಲಾಗುತ್ತಿದೆ.

ಶಿಡ್ಲಘಟ್ಟ 66/11 ಕೆ.ವಿ. ವಿದ್ಯುತ್ ಉಪಕೇಂದ್ರಕ್ಕೆ ಗರಿಷ್ಠ ಬೇಡಿಕೆಯ ಪ್ರಮಾಣ 17 ಮೆಗಾ ವ್ಯಾಟ್, ಸೀಮಿತ ವೇಳೆಯಲ್ಲಿ ಕನಿಷ್ಠ 10 ಮೆಗಾ ವ್ಯಾಟ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಈ ಸೀಮಿತ ವಿದ್ಯುತ್ತನ್ನು ಸರಬರಾಜು ಮಾಡಲು ಅನಿಯಮಿತವಾಗಿ ವಿದ್ಯುತ್ ನಿಲುಗಡೆ ಮಾಡುವುದು ಅನಿವಾರ್ಯವಾಗಿದೆ. ಶಿಡ್ಲಘಟ್ಟ 66/11 ವಿದ್ಯುತ್ ಉಪಕೇಂದ್ರದಲ್ಲಿ ಇರುವ 11 ಕೆವಿಯ ಸಾಮರ್ಥ್ಯದ 8 ಫೀಡರುಗಳಿಂದ ವಿದ್ಯುತ್ ಪೂರೈಸಲಾಗುತ್ತಿದೆ. ಈ ಫೀಡರುಗಳ ಪೈಕಿ, 2 ಫೀಡರುಗಳು ಪಟ್ಟಣ ಪ್ರದೇಶಕ್ಕೆ ಮೀಸಲಾಗಿವೆ. 5 ಫೀಡರುಗಳಲ್ಲಿ ಆರ್.ಎಲ್.ಎಂ.ಎಸ್. ಯೋಜನೆಯನ್ನು ಅಳವಡಿಸಿದ್ದು, ಉಳಿದ ಮತ್ತೊಂದು ಫೀಡರಿಗೂ ಸಹ ಆರ್.ಎಲ್.ಎಂ.ಎಸ್. ಯೋಜನೆಯನ್ನು ಅಳವಡಿಸುವ ಪ್ರಸ್ತಾವನೆ ಇದೆ. ಲಭ್ಯವಿರುವ ನಿಯಂತ್ರಿತ ವಿದ್ಯುತ್ ಅಗತ್ಯವನ್ನು ಪೂರೈಸಲು, ಎಲ್ಲಾ 8 ಫೀಡರುಗಳಲ್ಲಿ ದಿನವೊಂದಕ್ಕೆ ಒಟ್ಟಾರೆ 4.ಗಂಟೆಗಳ ಅವಧಿಗೆ, ಅಂದರೆ ಬೆಳಿಗ್ಗೆ 7-00 ರಿಂದ 9-00 ಗಂಟೆವರೆಗೆ ಹಾಗೂ ಮಧ್ಯಾಹ್ನ 2-00 ರಿಂದ 4-00 ಗಂಟೆವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತಿದೆ.

ಈ ವಿದ್ಯುತ್ ನಿಲುಗಡೆಯನ್ನು ಶಿಡ್ಲಘಟ್ಟ 66/11 ಕೆವಿ ವಿದ್ಯುತ್ ಉಪಕೇಂದ್ರದಲ್ಲಿ ಮಾಡುತ್ತಿದ್ದು, ರಾಜ್ಯದ ವಿದ್ಯುತ್ ಜಾಲದಲ್ಲಿ ವಿದ್ಯುತ್ ತರಂಗಾಂತರದ ತೊಂದರೆಯಾದಾಗ, ನೇರವಾಗಿ ಚಿಂತಾಮಣಿ 220 ಕೆವಿ ವಿದ್ಯುತ್ ಸ್ವೀಕರಣ ಕೇಂದ್ರದಿಂದ ವಿದ್ಯುತ್ ನಿಲುಗಡೆ ಮಾಡಲೇಬೇಕಾಗುತ್ತದೆ.

ಶ್ರೀ ಎ. ಮುನಿಯಪ್ಪ : ಮಾನ್ಯ ಸಚಿವರು ಈಗಾಗಲೇ ಶಿಡ್ಲಘಟ್ಟ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ಯಾವ ರೀತಿ ನಡೆಯುತ್ತಿದೆ ಎನ್ನುವ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಅವರು

ಚಿಂತಾಮಣಿಯ 220 ಕೆ.ವಿ. station ಮುಖಾಂತರ, ಅದರ minimum capacity ಇರುವುದು 110 ಮೆ.ವ್ಯಾ.

(ಈ ಹಂತದಲ್ಲಿ ಛೇರ್ಮನ್‌ರವರಾದ ಶ್ರೀ ಎನ್. ಯೋಗೀಶ್ ಭಟ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇತ್ತೀಚೆಗೆ supply ಆಗುತ್ತಿರುವುದು ಕೇವಲ 35 ಮೆ.ವ್ಯಾ. ಎಂದು ಅವರ ವರದಿಯಲ್ಲಿಯೇ ಹೇಳಿದ್ದಾರೆ. ಆದರೆ, ಮೂರನೇ ಒಂದು ಭಾಗ ಮಾತ್ರ ಅವರು ಅಲ್ಲಿಗೆ ಸರಬರಾಜು ಮಾಡುತ್ತಿದ್ದಾರೆ. ಈ ಸರಬರಾಜು ಮಾಡುವುದರಲ್ಲಿ 4 ತಾಲ್ಲೂಕುಗಳಾದ ಶ್ರೀನಿವಾಸಪುರ, ಚಿಂತಾಮಣಿ, ಕೋಲಾರದ ಕೆಲವು ಭಾಗ, ಶಿಡ್ಲಘಟ್ಟ ಇಲ್ಲಿಗೆ ಸರಬರಾಜು ಮಾಡುತ್ತಿದ್ದಾರೆ. ಶಿಡ್ಲಘಟ್ಟ tail end ನಲ್ಲಿದೆ. ಅಲ್ಲಿ ವಿದ್ಯುತ್ shortage ಬಂದ ತಕ್ಷಣ ಆ ಕಡೆ ಹತ್ತಿರವಿರುವ feeders ಗೆ ಕೊಟ್ಟು ಶಿಡ್ಲಘಟ್ಟ feeder ಗೆ ಕಡಿಮೆ ಸರಬರಾಜು ಮಾಡುತ್ತಿದ್ದಾರೆ. ಅದು ದೂರವಿದ್ದು, ಅಲ್ಲಿನವರ ಕೂಗು ಇಲ್ಲಿನವರಿಗೆ ಕೇಳುವುದಿಲ್ಲ. ಹೀಗಾಗಿ, ಇಲ್ಲಿ ನೀವು ಸುಮಾರು 35 ಮೆ.ವ್ಯಾ. ಕೊಡುತ್ತಿದ್ದು, ಅದರಲ್ಲಿ ನಮ್ಮ ಶಿಡ್ಲಘಟ್ಟ power station ಗೆ 5 ಮೆ.ವ್ಯಾ. ವಿದ್ಯುತ್ ಸಹ ತಲುಪುತ್ತಿಲ್ಲ. ಕನಿಷ್ಠ ಪ್ರತಿನಿತ್ಯ 2 ಗಂಟೆ ಸಹ power supply ಆಗುತ್ತಿಲ್ಲ. ಅಲ್ಲಿರುವ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ದೊಡ್ಡದಾಗಿದೆ. ಒಂದು ಕಡೆ, ಕೊಳವೆ ಬಾವಿಗಳಲ್ಲಿರುವ ನೀರು ಕಡಿಮೆ. ಅದರಲ್ಲಿ ನೀವು ಕೊಡುವ 2 ಗಂಟೆ ವಿದ್ಯುತ್‌ನಲ್ಲಿ ನೀರೆತ್ತುವುದಕ್ಕಾಗದೇ ಕುಡಿಯುವ ನೀರಿನ ಸಲುವಾಗಿ ಕಾನೂನಿನ ಶಾಂತಿಭಂಗ ಆಗುವ ಪರಿಸ್ಥಿತಿ ಹಳ್ಳಿಗಳಲ್ಲಿ ಬರುತ್ತಿದೆ. ಇನ್ನೊಂದು ಕಡೆ, ನಮ್ಮ silk industries. 5-6 ಸಾವಿರ ಜನ ನಮ್ಮ Silk Reelers Industry ಇಟ್ಟು ವಿದ್ಯುತ್ ಮೇಲೆ ಅವಲಂಬಿತರಾಗಿದ್ದಾರೆ. ಜೊತೆಗೆ, ಅವರೆಲ್ಲಾ ಬಡವರು, ಅವರ್ಯಾರೂ generators ಇಟ್ಟುಕೊಂಡಿಲ್ಲ. ಅವರು middle class ಜನ. ಅವರು ಬೆಳಿಗ್ಗೆ ಕೂಲಿ ಜನರನ್ನು ಕರೆದುಕೊಂಡು ಬಂದು ಕೂರಿಸಿಕೊಂಡರೆ ಕೇವಲ 2 ಗಂಟೆ ವಿದ್ಯುತ್ ಬಂದರೆ ಅವರ ಗತಿ ಏನಾಗಬಹುದು? ಈಗಾಗಲೇ ಅವರೆಲ್ಲ ಹತಾಶರಾಗಿದ್ದಾರೆ. ನಿಮ್ಮ power station ಹತ್ತಿರ ಹೋಗಿ ಧರಣಿ ಮಾಡಿದ್ದಾರೆ. ಏನು ಧರಣಿ ಮಾಡಿದರೂ ಕಳೆದ ಒಂದು ತಿಂಗಳಿನಿಂದ ವಿದ್ಯುತ್‌ನ ಅವ್ಯವಸ್ಥೆಯನ್ನು ಸರಿಪಡಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. ನಾನೊಂದು ಮಾತನ್ನು ಕೇಳುತ್ತೇನೆ. ಇಷ್ಟು ಅವ್ಯವಸ್ಥೆಯಾಗುತ್ತಿದ್ದರೂ ಸರ್ಕಾರವಾಗಲಿ, ಇಲಾಖೆಯಾಗಲಿ ಏಕೆ ಇದಕ್ಕೆ ಗಮನ ಕೊಡಲಿಲ್ಲ? ಇಷ್ಟು ಅವ್ಯವಸ್ಥೆಯಾಗಿದೆ. Power shortage ಇದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಿಮ್ಮ RTPCL ನಲ್ಲಿ ತೊಂದರೆಯಾಗಿದೆ ಎಂದು ಹೇಳುತ್ತೀರಿ, ಬೇರೆ ನಿಮ್ಮ ಜಲ ವಿದ್ಯುತ್ ಕೇಂದ್ರಗಳಲ್ಲಿ ಉತ್ಪಾದನೆ ಕಡಿಮೆ ಇದೆ ಎಂದು ಹೇಳುತ್ತೀರಿ. ಎಲ್ಲ ಒಪ್ಪಿಕೊಳ್ಳುತ್ತೇನೆ. ಇಂಥ emergency ಯಲ್ಲಿ ಪರ್ಯಾಯವಾದಂಥ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ನಮ್ಮಲ್ಲಿ Power Trading Corporation ಇದೆ, Energy Exchange Programme ಇದೆ. Energy Exchange Programme ಮುಖಾಂತರ immediate ಆಗಿ ಏಕೆ ನೀವು ವ್ಯವಸ್ಥೆ ಮಾಡಿಕೊಡಲಿಲ್ಲ? ಕಳೆದ ಒಂದು ತಿಂಗಳಿನಿಂದ ಈ ಅವ್ಯವಸ್ಥೆ ರಾಜ್ಯದಲ್ಲಿ

ನಡೆಯುತ್ತಿದೆ. ಹಳ್ಳಿಗಳಲ್ಲಿ 2 ಗಂಟೆ ಸಹ ವಿದ್ಯುತ್ ಬರುತ್ತಿಲ್ಲ. ಬೆಳೆ ಬೆಳೆದ ಆ ರೈತರು ಹಾಳಾಗಿ ಹೋಗುತ್ತಿದ್ದಾರೆ. ನಿಮಗೆ ಗೊತ್ತಿರುವ ಹಾಗೆ, ನಮ್ಮ ಭಾಗದಲ್ಲಿ ನೂರಕ್ಕೆ ತೊಂಭತ್ತು ಭಾಗ ತೋಟಗಾರಿಕೆ ಬೆಳೆ ಇದೆ. ಮೂರು ದಿವಸ ನೀರು ಹಾಯಿಸದಿದ್ದರೆ ಆ ಬೆಳೆ ಹಾಳಾಗಿ ಹೋಗುತ್ತದೆ. 15-20 ದಿವಸಗಳಿಂದ ರೈತರು ಬೆಳೆ ಕಟಾವು ಮಾಡಿಲ್ಲ. ಬೆಳೆಗೆ ನೀರು ಹಾಯಿಸಿಲ್ಲ. ಇಂಥ ಪರಿಸ್ಥಿತಿಯಲ್ಲಿ ಬೆಳೆ ಪೂರಾ ನಾಶವಾಗತಕ್ಕಂಥ ಪರಿಸ್ಥಿತಿ ಬಂದಿದೆ. ಈ ನಷ್ಟವನ್ನು ಯಾರು ಭರಿಸುತ್ತಾರೆ? ವಿದ್ಯುತ್ ಇಲಾಖೆಯವರು ಈ ನಷ್ಟವನ್ನು ಭರಿಸಿಕೊಡುತ್ತಾರೆಯೇ? ಕಳೆದ ಒಂದು ತಿಂಗಳಿನಿಂದ ಆ ರೈತರಿಗೆ ನೀರು ಹಾಯಿಸಲು ವಿದ್ಯುತ್ ಸರಬರಾಜು ಮಾಡುತ್ತಿಲ್ಲ. ಇಷ್ಟು ಅವ್ಯವಸ್ಥೆಯಾದರೂ ನೀವು ಕನಿಷ್ಠ Energy programme ಹಾಕತಕ್ಕಂಥದ್ದರಲ್ಲಿ ವಿಫಲರಾಗಿದ್ದೀರಿ ಅಥವಾ emergencyಯಾಗಿ, ಇಷ್ಟು ಕ್ಲಿಷ್ಟ ಪರಿಸ್ಥಿತಿ ಇದೆ, ಈ crisis ಇದೆ, ಇಂಥ ಸಮಯದಲ್ಲಿ ತುರ್ತಾಗಿ ವಿದ್ಯುತ್ ಅನ್ನು purchase ಮಾಡಿ supply ಮಾಡುವುದರಲ್ಲಿ fail ಆಗುತ್ತಿದ್ದೀರಿ. ಇಷ್ಟು ದಿವಸ ಬೇಕೆ? 8-10, 15 ದಿವಸಗಳಲ್ಲಿ ಕಳೆದ ಒಂದು ತಿಂಗಳಿನಿಂದ ಸತತವಾಗಿ ಈ ತರಹ interruption ಆಗುತ್ತಿದೆ. ಸರ್ಕಾರ ಇದರ ಕಡೆಗೆ ಗಮನ ಕೊಡಲಿಲ್ಲವೆಂದರೆ consumer ಪರಿಸ್ಥಿತಿ ಏನಾಗಬಹುದು? ಬಹುಶಃ ಅದರ ಬಗ್ಗೆ ನಿಮಗೆ ನಿಗಾ ಇಲ್ಲವೆಂದು ಅನಿವಾರ್ಯವಾಗಿ ಆರೋಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ರೈತರು ಧರಣಿ ಮಾಡುತ್ತಿದ್ದಾಗ ಶಿಡ್ಲಘಟ್ಟದಲ್ಲಿದ್ದಾಗ, ನೀವೆಲ್ಲ ಶಾಸಕರು ಏನು ಮಾಡುತ್ತಿದ್ದೀರಿ? ಇಷ್ಟೊಂದು interruption ಆಗುತ್ತಿದೆ, ಕನಿಷ್ಠ 2 ಗಂಟೆ ಸಹ ವಿದ್ಯುತ್ ಬರುತ್ತಿಲ್ಲ, ನಮಗೆ ಉತ್ತರ ಕೊಟ್ಟು ಹೋಗಿ ಎಂದು consumers ಹೇಳುತ್ತಾರೆ. ಇಂಥ ಪರಿಸ್ಥಿತಿ ಉದ್ಭವಿಸಿದೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಬೇಡಿಕೆ ಇಡುವುದೇನೆಂದರೆ, ಈ unschedule load shedding ಏನಿದೆ, ಸರಿಯಾಗಿ ಎಷ್ಟು ಗಂಟೆ ವಿದ್ಯುಚ್ಛಕ್ತಿ ಕೊಡುವುದಕ್ಕಾಗುತ್ತದೆಂದು schedule ಮಾಡಿ. ಜೊತೆಗೆ, immediate ಆಗಿ ಇಂಥ crisis ಇರುವ ಕಡೆ Power Trading Corporation ನವರು readyಯಾಗಿದ್ದಾರೆ, ಅವರ ಹತ್ತಿರ Atomic Energy ಇದೆ, Thermal Plant ಇದೆ, ಅವರು ಯಾವಾಗ ಬೇಕಾದರೂ supply ಮಾಡುವುದಕ್ಕೆ ready ಇದ್ದಾರೆ. ಸ್ವಲ್ಪ cost ಆಗಬಹುದು. ಈ crisis ಇರುವ ಸಂದರ್ಭದಲ್ಲಿ ಸರ್ಕಾರ cost ಅನ್ನು ಭರಿಸಲೇಬೇಕಾಗುಕತ್ತದೆ. ಆ ಕೆಲಸವನ್ನು ಈಗ ಮಾಡದೇ ಇನ್ಯಾವಾಗ ನೀವು ಕಷ್ಟದ ಪರಿಸ್ಥಿತಿಯಲ್ಲಿ ರೈತರ ಜೊತೆಯಲ್ಲಿ ಬರುತ್ತೀರಿ? ಇವತ್ತು ಬೆಳೆ ಇರುವ ಕಾಲದಲ್ಲಿ ತೊಂದರೆಯಾಗಿದೆ. ರೈತರು ದಿನದ 24 ಗಂಟೆಯೂ ವಿದ್ಯುತ್ ಕೊಡಿ ಎಂದು ಕೇಳುತ್ತಿಲ್ಲ. ನಾವು ಕೇಳತಕ್ಕಂಥದ್ದು ಕನಿಷ್ಠ 8-10 ಗಂಟೆ ವಿದ್ಯುತ್. ರೇಷ್ಮೆ ರೀಲರ್ಸ್ 8-10 ಗಂಟೆ ವಿದ್ಯುತ್ ಅನ್ನು day time ಕೊಡಿ ಎಂದು ಕೇಳುತ್ತಿದ್ದಾರೆ. ಇದು ಇರುವ ಪರಿಸ್ಥಿತಿ. ಇದನ್ನು ನಿವಾರಣೆ ಮಾಡದಿದ್ದರೆ ಗ್ರಾಹಕರು ಬಹಳ ಕಷ್ಟಕ್ಕೆ ಸಿಲುಕುತ್ತಾರೆ. ದಯಮಾಡಿ, ಇದಕ್ಕೆ ತತ್‌ಕ್ಷಣ attention ಕೊಡಬೇಕು. ನೀವು ಹೇಳಿರುವ policy matter ಏನಿದೆ, ಇದೆಲ್ಲ long range ನಲ್ಲಿ relief ಕೊಡುತ್ತದೆ, ನಾನು ಇಲ್ಲವೆಂದು ಹೇಳುವುದಿಲ್ಲ. ತತ್‌ಕ್ಷಣಕ್ಕೆ ಈ crisis ಅನ್ನು meet ಮಾಡುವುದಕ್ಕೆ ನೀವೇನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ (ಇಂಧನ ಸಚಿವರು) : ಮಾನ್ಯ ಛೇರ್ಮನ್‌ರವರೇ, ಮಾನ್ಯ ಸದಸ್ಯರಾದ ಮುನಿಯಪ್ಪನವರು ಹೇಳುತ್ತಿರುವ ಅಂಶ ಸರಿ ಇದೆ. ವಿದ್ಯುತ್ ಕೊರತೆಯಿಂದ ಕಾನೂನಿನ ಸುವ್ಯವಸ್ಥೆಗೂ ಸಮಸ್ಯೆ ಬರುತ್ತಿದೆ. ರೇಷ್ಮೆ ಕೈಗಾರಿಕೆಗೆ ತೊಂದರೆಯಾಗಿದೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ತೋಟಗಾರಿಕೆ ಬೆಳೆ ಸಹ ಹಾಳಾಗುತ್ತಿದೆ. ಈಗ ಅದಕ್ಕೋಸ್ಕರ ನಾವೀಗ ತಾತ್ಕಾಲಿಕವಾಗಿ ಈ ಕೊರತೆ ಕಡೆ ಗಮನಹರಿಸಿ, ಜಿಂದಾಲ್‌ನಿಂದ 50 ಮೆ.ವ್ಯಾ., ಟಾಟಾದಿಂದ 50 ಮೆ.ವ್ಯಾ., Energy Exchange ನಿಂದ ಸುಮಾರು 150-200 ಮೆ.ವ್ಯಾ.ನಷ್ಟು ವಿದ್ಯುತ್ ಖರೀದಿಯಾಗುತ್ತಿದೆ. ಆದಷ್ಟು ಖಂಡಿತ ನಾನು ಇದರ ಕಡೆಗೆ ಗಮನ ಕೊಟ್ಟು ನಿಮಗೆ ತೊಂದರೆಯಾಗದ ಹಾಗೆ ನೋಡಿಕೊಳ್ಳುತ್ತೇನೆ. ಇವತ್ತೇ ನೀವು ಸಂಜೆ ಬನ್ನಿ, ನಮ್ಮ ಅಧಿಕಾರಿಗಳನ್ನು ಕರೆಸಿ, ನಮ್ಮ ಉನ್ನತಾಧಿಕಾರಿಗಳ ಜೊತೆ ಕುಳಿತು ಚರ್ಚೆ ಮಾಡಿ, ಏನು ಸಾಧ್ಯವೋ ಅದನ್ನು ಪರಿಹಾರ ಮಾಡಿಕೊಡುತ್ತೇನೆ.

ಶ್ರೀ ಎ. ಮುನಿಯಪ್ಪ : ನಾನು ಈಗಾಗಲೇ ಮಾಹಿತಿ ತರಿಸಿಕೊಂಡಿದ್ದೇನೆ. ಅಲ್ಲಿ ನಮಗೆ ಕನಿಷ್ಠ ಮೂರನೇ ಒಂದು ಭಾಗ ವಿದ್ಯುತ್ ಬರುತ್ತಿಲ್ಲ. ನಮ್ಮ requirement ಏನಿದೆ ಅದರಲ್ಲಿ ಕನಿಷ್ಠ 15,20% ವಿದ್ಯುತ್ ಬರುತ್ತಿಲ್ಲ. ಹೋದರೆ ಹೋಗಲಿ, ಅದರಲ್ಲಿಯೂ 50% ವಿದ್ಯುತ್ ಕಟ್ ಮಾಡಿದ್ದರು. ಅದಾದರೂ ಬರುತ್ತಿದೆಯೇ ಎಂದರೆ, ಕಳೆದ 20 ದಿವಸಗಳಿಂದ 15% ಪವರ್ ಮಾತ್ರ ಬರುತ್ತಿದೆ. ಅವರು ಹೇಗೆ distribution ಮಾಡುತ್ತಾರೆ? ನಿಮ್ಮ ಅಧಿಕಾರಿಗಳು ಇಷ್ಟು ದಿವಸ ಕಣ್ಣುಮುಚ್ಚಿ ಕುಳಿತುಕೊಂಡಿದ್ದಾರೆಂದರೆ ಏನರ್ಥ? ಎಷ್ಟು ನಿರ್ಲಕ್ಷ್ಯವಿದೆ ನೋಡಿ. ಇದರ ಮೇಲೆ ಅವಲಂಬಿತವಾಗಿರುವ ಗ್ರಾಹಕರ ಗತಿ ಏನು? Power is the essential commodity. ಅದು ಬಹಳ ಅತ್ಯವಶ್ಯಕವಾದ ವಸ್ತು. ಅದು ದಿನವಹಿ ಬೇಕಾಗಿರುವ ಬಳಕೆ ವಸ್ತುವಾಗಿದೆ. ಅದರ ಬಗ್ಗೆ ಆದ್ಯತೆ, ಗಮನವನ್ನು ಎಷ್ಟು ಕೊಡಬೇಕೋ ಅಷ್ಟನ್ನು ಸರ್ಕಾರ ತಕ್ಷಣ ಕೊಡಬೇಕು. ತಕ್ಷಣ ನೀವು relief ಕೊಡತಕ್ಕಂಥ ಕೆಲಸ ಮಾಡಬೇಕು.

ಶ್ರೀ ಮಾಲೀಕಯ್ಯ ಗುತ್ತೇದಾರ್ : Load Shedding ಹಳ್ಳಿಯಲ್ಲಷ್ಟೇ ಅಲ್ಲ ರಾಜ್ಯಾದ್ಯಂತ ಸಮಸ್ಯೆಯಾಗಿದೆ. ಸರ್ಕಾರ Load Shedding ಕಡ್ಡಾಯ ಮಾಡಿದ ಪ್ರಕಾರ ಆ ವೇಳೆಯಲ್ಲೂ ವಿದ್ಯುತ್ ಕೊಡುತ್ತಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಬಹಳ ತೊಂದರೆಯಾಗುತ್ತಿದೆ. ಈಗಾಗಲೇ ಮುನಿಯಪ್ಪನವರು ಬಹಳ ಅರ್ಥಪೂರ್ಣವಾದಂಥ ಪ್ರಶ್ನೆಯನ್ನು ಪ್ರಸ್ತಾಪಿಸಿದ್ದಾರೆ. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ Load Shedding ನಿಯಮ ಏನು ಮಾಡಿದ್ದೀರಿ, ಅದಕ್ಕನುಗುಣವಾಗಿ ಅದೇ ವೇಳೆಯಲ್ಲಿ ಸರಿಯಾಗಿ, ಸಮರ್ಪಕವಾಗಿ ವಿದ್ಯುತ್ ಕೊಡುವ ವ್ಯವಸ್ಥೆ ಮಾಡುವುದಕ್ಕೆ ತಾವು ಆದೇಶ ಕೊಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ನಾನು ಅದಕ್ಕೆ ಗಮನ ಕೊಡುತ್ತೇನೆ.

(ii) **ವಿಷಯ** : ಹಾಸನ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ವಿಶೇಷ ಉಪ ವಿಭಾಗ, ಚನ್ನರಾಯಪಟ್ಟಣ ಕಛೇರಿಯನ್ನು ಲೋಕೋಪಯೋಗಿ ವಿದ್ಯುತ್ ಉಪ ವಿಭಾಗ, ಶಿವಮೊಗ್ಗ ಎಂದು ಪುನರ್‌ನಾಮಕರಣ ಮಾಡಿರುವುದು.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಛೇರ್ಮನ್‌ರವರೇ, ಹಾಸನ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ವಿಶೇಷ ಉಪ ವಿಭಾಗ, ಚನ್ನರಾಯಪಟ್ಟಣ ಕಛೇರಿಯನ್ನು ಲೋಕೋಪಯೋಗಿ ವಿದ್ಯುತ್ ಉಪ ವಿಭಾಗ, ಶಿವಮೊಗ್ಗ ಎಂದು ಪುನರ್‌ನಾಮಕರಣ ಮಾಡಿರುವ ಕುರಿತು ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಛೇರ್ಮನ್‌ರವರೇ, ರಾಷ್ಟ್ರೀಯ ಹೆದ್ದಾರಿ ವಿಶೇಷ ಉಪ ವಿಭಾಗ, ಚನ್ನರಾಯಪಟ್ಟಣ, ಕಚೇರಿಯನ್ನು ಲೋಕೋಪಯೋಗಿ ವಿದ್ಯುತ್ ಉಪ ವಿಭಾಗ, ಶಿವಮೊಗ್ಗ ಎಂದು ಪುನರ್ ನಾಮೀಕರಿಸಿ ಶಿವಮೊಗ್ಗಕ್ಕೆ ಸ್ಥಳಾಂತರಿಸಿ ದಿನಾಂಕ 11-6-2008 ರಂದು ಆದೇಶ ಹೊರಡಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ ವಿಶೇಷ ಉಪ ವಿಭಾಗ, ಚನ್ನರಾಯಪಟ್ಟಣ ಕಚೇರಿಗೆ ಸಂಬಂಧಿಸಿದ 39 ಕಾಮಗಾರಿಗಳನ್ನು ಸಿ.ಆರ್.ಎಫ್., ಕೆ.ಆರ್.ಡಿ.ಸಿ.ಎಲ್. ಮತ್ತು ಇತರೆ ಅನುದಾನಗಳ ವತಿಯಿಂದ ನಿರ್ವಹಿಸಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಎಲ್ಲಾ 39 ಕಾಮಗಾರಿಗಳನ್ನು ಹತ್ತಿರವಿರುವ ಉಪ ವಿಭಾಗಗಳಿಗೆ ಈ ಕೆಳಕಂಡಂತೆ ಹಂಚಿಕೆ ಮಾಡಿ ದಿನಾಂಕ 16-6-2008 ರಂದು ಆದೇಶ ಹೊರಡಿಸಲಾಗಿದೆ.

1.	ಲೋಇ ಉಪವಿಭಾಗ, ಚನ್ನರಾಯಪಟ್ಟಣ	4 ಕಾಮಗಾರಿಗಳು
2.	ಲೋಇ ಉಪವಿಭಾಗ, ಹೊಳೇನರಸೀಪುರ	30 ಕಾಮಗಾರಿಗಳು
3.	ಲೋಇ ಉಪವಿಭಾಗ, ಕೆ.ಆರ್. ನಗರ	2 ಕಾಮಗಾರಿಗಳು
4.	ಲೋಇ ಉಪವಿಭಾಗ, ಹಾಸನ	2 ಕಾಮಗಾರಿಗಳು
5.	ಲೋಇ ಉಪವಿಭಾಗ, ಪಾಂಡವಪುರ	1 ಕಾಮಗಾರಿ

ಈ ಮೇಲ್ಕಂಡ ಎಲ್ಲಾ ಉಪ ವಿಭಾಗಗಳು ಚನ್ನರಾಯಪಟ್ಟಣಕ್ಕೆ ಅತ್ಯಂತ ಸಮೀಪವಿದ್ದು, ಸಾಕಷ್ಟು ಸಿಬ್ಬಂದಿಗಳಿರುವುದರಿಂದ ಯಾವುದೇ ಕಾಮಗಾರಿಗಳು ಸ್ಥಗಿತಗೊಂಡಿರುವುದಿಲ್ಲ ಹಾಗೂ ಸಾರ್ವಜನಿಕರಿಗೆ ಯಾವುದೇ ತೊಂದರೆ ಉಂಟಾಗದೆ ಸದರಿ ಉಪ ವಿಭಾಗದ ಕಾಮಗಾರಿಗಳ ಪ್ರಗತಿಯು ಯಾವುದೇ ಕುಂಠಿತವಿಲ್ಲದೆ ಸುಗಮವಾಗಿ ನಡೆಯುತ್ತಿದೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಲೋಕೋಪಯೋಗಿ ಸಚಿವರು ಕಾರಣ ಕೊಟ್ಟು ಹೇಳಿಕೆ ಕೊಟ್ಟಿದ್ದಾರೆ. ಏಕೆಂದರೆ, ಈ ಸರ್ಕಾರ ಬಂದ ಮೇಲೆ ನಾವು ಯಾವುದೇ ದ್ವೇಷದ ರಾಜಕೀಯ ಮಾಡುವುದಿಲ್ಲವೆನ್ನುವ ಭಾವನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಪದೇ ಪದೇ ಯಾವುದೇ

ದ್ವೇಷದ ರಾಜಕೀಯ ಮಾಡುವುದಿಲ್ಲವೆನ್ನುವ ಭಾವನೆ ವ್ಯಕ್ತಪಡಿಸಿ ಮುಖ್ಯಮಂತ್ರಿಗಳು ಮೇ 30 ನೇ ತಾರೀಖು ಅಧಿಕಾರ ವಹಿಸಿಕೊಂಡರು. 1 ನೇ ತಾರೀಖು ಶಿವಮೊಗ್ಗ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಒಂದು ಸಭೆ ಕರೆದರು. ಆ ಸಭೆಯಲ್ಲಿ ಒಂದು ನಿರ್ಣಯ ಮಾಡಿ, ಮೂರು ದಿವಸಗಳೊಳಗೆ ಈ Sub Division ಶಿವಮೊಗ್ಗಕ್ಕೆ ಬರಬೇಕೆಂದು ಒಂದು ಆದೇಶ ಕೊಟ್ಟರು. 6 ನೇ ತಾರೀಖು ಮುಖ್ಯ ಇಂಜಿನಿಯರ್‌ರವರು ಒಂದು ಲೆಟರ್ ಬರೆಯುತ್ತಾರೆ. ಮುಖ್ಯ ಇಂಜಿನಿಯರ್‌ರವರು ಏನು ಲೆಟರ್ ಬರೆದಿದ್ದಾರೆನ್ನುವುದನ್ನು ಸನ್ಮಾನ್ಯ ಲೋಕೋಪಯೋಗಿ ಸಚಿವರು ಓದಬೇಕು. ಆ ಲೆಟರ್‌ನಲ್ಲಿ, ವಿಷಯ-ಶಿವಮೊಗ್ಗ ವಿಭಾಗದಲ್ಲಿ ಒಂದು ವಿದ್ಯುತ್ ವಿಭಾಗವನ್ನು ತೆರೆಯುವ ಬಗ್ಗೆ ಎಂದು ಇದೆ. ಇದರಲ್ಲಿ ಶಿವಮೊಗ್ಗ ಜಿಲ್ಲೆಯು ಮುಖ್ಯಮಂತ್ರಿಗಳ ಜಿಲ್ಲೆಯಾಗಿದ್ದು, ಇನ್ನೂ ಹೆಚ್ಚಿನ ಕಾಮಗಾರಿಗಳು ಬರುವ ಹಿನ್ನೆಲೆಯಲ್ಲಿ ಒಂದು ವಿದ್ಯುತ್ ವಿಭಾಗದ ಅವಶ್ಯಕತೆ ಇರುತ್ತದೆ. ನೀರಾವರಿ ಇಲಾಖೆಯಿಂದ ಅಥವಾ ಬೇರೆ ಯಾವುದಾದರೂ ಇಲಾಖೆಯಿಂದ ಉಪ ವಿಭಾಗ ಮುಕ್ತಾಯಗೊಂಡಿದ್ದನ್ನು ಹಾಲಿ ಇರುವಂಥ ಉಪ ವಿಭಾಗವನ್ನು ಶಿವಮೊಗ್ಗಕ್ಕೆ ಕೊಡಿ ಎಂದು ಕೇಳಿದ್ದಾರೆ. ಆದರೆ ಅಲ್ಲಿ ಮೆಡಿಕಲ್ ಕಾಲೇಜ್‌ಗೆ 5 ಕೋಟಿ ರೂಪಾಯಿ ವರ್ಕ್ ನಡೆಯುವಂಥ ಎಲೆಕ್ಟ್ರಿಕ್ ಸಬ್ ಡಿವಿಜನ್‌ಗೆ ಇದನ್ನು ಬದಲಾಯಿಸಬೇಕೆನ್ನುವ ಆದೇಶವನ್ನು ನಿಮಗೆ ಕೇಳುತ್ತಿದ್ದೇನೆ. ಈ ಆದೇಶದಲ್ಲಿ ಹೇಳುತ್ತಾರೆ, Right to Information ನಿಂದಲೇ ಮಾಹಿತಿ ತೆಗೆದುಕೊಂಡೇ ಈ ಸಭೆಗೆ ಮಂಡಿಸುತ್ತಿದ್ದೇನೆ. ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಏನು ಹೇಳುತ್ತಾರೆ ಅಂದರೆ, 25 ಕೋಟಿ ರೂಪಾಯಿ ವರ್ಕ್ ಇದೆ, ಇದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು National Highway Chief Engineer ರವರು ಬರೆಯುತ್ತಾರೆ. 9 ನೇ ತಾರೀಖಿನ ದಿವಸ ಅವರು ಬರೆದಿರುವ ಪತ್ರವನ್ನು ತಮಗೆ ಈಗ ಕೊಡುತ್ತಿದ್ದೇನೆ. ಇಲ್ಲಿ ಆದೇಶದಲ್ಲೂ ಕೂಡ, ಚನ್ನರಾಯಪಟ್ಟಣ ಸ್ಪೆಷಲ್ ಸಬ್ ಡಿವಿಷನ್ ಮಸ್ತಕಾಭಿಷೇಕ ಮಾಡುವ ಸಂದರ್ಭದಲ್ಲಿ ಸುಮಾರು 25 ಕೋಟಿ ರೂಪಾಯಿ ವರ್ಕ್ ಇದೆ, ಹೀಗಾಗಿ ಅದನ್ನು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಆದರೆ, ಐದು ಕೋಟಿ ರೂಪಾಯಿ ಇರುವ ಸಬ್ ಡಿವಿಜನ್ ತೆಗೆದುಕೊಂಡು ಹೋಗಿ, ನಮ್ಮ ಜಿಲ್ಲೆಯ ಐದು ಜನ ಶಾಸಕರು ಲೆಟರ್ ಕೊಡುತ್ತೇವೆ, ಲೋಕಸಭಾ ಸದಸ್ಯರು, ಶಾಸಕರು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಹೇಳಿದ್ದೇವೆ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ನಾನು ಪುಟ್ಟೇಗೌಡ್ರು ಕೂಡಿ ಹೇಳಿದ್ದೇವೆ. ಆದರೆ, ಇವತ್ತು ಈ ಸಬ್ ಡಿವಿಜನ್ ಚೇಂಜ್ ಮಾಡುವಂಥ ಉದ್ದೇಶ ಏನು? 25 ಕೋಟಿ ರೂಪಾಯಿ ಕೆಲಸ ನಡೆಯುವಂಥ ಒಂದು ಸಬ್ ಡಿವಿಜನ್‌ನ್ನು ಎಲೆಕ್ಟ್ರಿಕ್ ಸಬ್ ಡಿವಿಜನ್ ಆಗಿ ಪರಿವರ್ತನೆ ಮಾಡುವ ಉದ್ದೇಶ ಏನು? ಇದು ಸಿವಿಲ್ ಸಬ್ ಡಿವಿಜನ್. ಸಿವಿಲ್ ಇರುವುದನ್ನು ತೆಗೆದುಕೊಂಡು ಹೋಗಿ ಎಲೆಕ್ಟ್ರಿಕ್ ಸಬ್ ಡಿವಿಜನ್ ಮಾಡುವಂಥ ಉದ್ದೇಶ ಏನು ಸ್ವಾಮಿ? ಮಾನ್ಯ ಲೋಕೋಪಯೋಗಿ ಸಚಿವರು ಅಲ್ಲಿ ವರ್ಕ್ ಎಷ್ಟು ಇದೆ ಎನ್ನುವುದನ್ನು ದಯಮಾಡಿ ಸಭೆಯ ಗಮನಕ್ಕೆ ತರಲಿ. ವರ್ಕ್ ಇಷ್ಟು ಇದೆ, ಯಾವ ಉದ್ದೇಶಕ್ಕೆ ತೆಗೆಯುತ್ತಿದ್ದೀರಿ? ನಾನು ಇನ್ನೊಂದು ಸಲಹೆ ಕೊಟ್ಟಿದ್ದೇನೆ. ಡಮ್ಮಿ ಇರುವುದನ್ನು ತೆಗೆದುಕೊಳ್ಳಿ ಅದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲವೆಂದು

ಸಲಹೆ ಕೊಟ್ಟಿದ್ದೇನೆ. ಚನ್ನರಾಯಪಟ್ಟಣದಿಂದ ತೆಗೆಯುವುದಕ್ಕೆ ಏನು ಕಾರಣ? ಏನು ಉದ್ದೇಶ? ಯಾವ ಉದ್ದೇಶಕ್ಕಾಗಿ ತೆಗೆಯುತ್ತಿದ್ದೀರಿ? ಏನಾದರೂ ತಪ್ಪು ಮಾಡಿ ಅದರಲ್ಲಿ ಅವ್ಯವಹಾರ ಆಗಿದ್ದರೆ ತನಿಖೆ ಮಾಡಿ. ನಿಮ್ಮ ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಈಗಾಗಲೇ ಎಲ್ಲಾ ಕಡತವನ್ನು ಹುಡುಕುತ್ತಿದ್ದಾರೆ. ಬೇಕಾದರೆ ಇಡೀ ಮೂರು ವರ್ಷ ಆರು ತಿಂಗಳು ಮಾಡಿರುವ ಕೆಲಸದ ಪಟ್ಟಿಯನ್ನು ತಮಗೆ ಕೊಡುತ್ತೇನೆ. ಯಾವ ತರಹದ ತನಿಖೆ ಬೇಕಾದರೂ ಮಾಡಿ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳೇ ಒಂದು ಹೇಳಿಕೆ ಕೊಟ್ಟಿದ್ದಾರೆ. ಆರೋಗ್ಯ ವಿವಿಯ ಹಗರಣ ದೊಡ್ಡದು, ಒಂದಿಬ್ಬರು ಅಧಿಕಾರಿಗಳನ್ನು ಮಟ್ಟ ಹಾಕಿದರೆ ದೊಡ್ಡದು ಎಂದು ಹೇಳಿದ್ದಾರೆ. ನಾನು ಇವತ್ತಿಗೂ ಸಿದ್ಧ. ನಾನು ಲೋಕೋಪಯೋಗಿ ಇಲಾಖೆಯಲ್ಲಿ ಮೂರು ವರ್ಷ ಆರು ತಿಂಗಳು ಇದ್ದಂಥ ಸಂದರ್ಭದಲ್ಲಿ ತಾವು ಯಾವ ತನಿಖೆ ಬೇಕಾದರೂ ಮಾಡಿ, ಅದಕ್ಕೆ ನಾನು ಸಿದ್ಧ. ಸಿಬಿಐ ತನಿಖೆ ಮಾಡುವುದಾದರೆ ಮಾಡಿ. ಅಥವಾ ಯಾವ ಮಟ್ಟದ ತನಿಖೆ ಮಾಡುತ್ತೀರೋ ಮಾಡಿ. ಪ್ರಧಾನ ಕಾರ್ಯದರ್ಶಿಗಳ ಬಳಿ ಕಡತ ಇಲ್ಲವೆಂದರೆ ಬೇಕಾದರೆ ಎಲ್ಲವನ್ನು ಕಳುಹಿಸಿಕೊಡುತ್ತೇನೆ. ನಾನೇನು ಕೇಳುವುದು ಎಂದರೆ, ಅದರ ಉದ್ದೇಶ ಏನು? 25 ಕೋಟಿ ರೂಪಾಯಿ ಕೆಲಸ ಇರುವಂಥ ನಾಲ್ಕು ತಾಲ್ಲೂಕುಗಳಿಗೆ ಸೇರಿದಂಥ ಸಬ್ ಡಿವಿಜನ್ ಅನ್ನು ಸೆಂಟರ್ ಇದೆ ಎಂದು ಮಾಡಿದ್ದೇವೆ. ಇದನ್ನು ತೆಗೆಯುವಂಥ ಉದ್ದೇಶ ಏನು? ಇದು ರಾಜಕೀಯ ದುರುದ್ದೇಶವೋ? ಅಥವಾ ಬೇರೆ ಏನು ಎನ್ನುವುದನ್ನು ದಯಮಾಡಿ ಮಾನ್ಯ ಸಚಿವರು ಈ ಸಭೆಗೆ ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ನಾನು ಕೂಡ ಆ ಪತ್ರಕ್ಕೆ ಸಹಿ ಮಾಡಿದ್ದೇನೆ.

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಅವಶ್ಯಬಿದ್ದರೆ ತಾವು ಪುನಃ ಪ್ರಶ್ನೆ ಕೇಳಿ ಅದಕ್ಕೆ ನಾನು ಉತ್ತರಿಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಅವಶ್ಯಕತೆ ಇದೆ.

ಶ್ರೀ ಹೆಚ್.ಡಿ. ರೇವಣ್ಣ : ಅವಶ್ಯಕತೆಯಿಲ್ಲದಿದ್ದರೆ ನಾವು ಮಾಡುತ್ತೇವೆಯೇ? ಆ ಸಬ್ ಡಿವಿಜನ್‌ನಲ್ಲಿ ಏನಾದರೂ ತಪ್ಪು ಆಗಿದ್ದರೆ ಅವ್ಯವಹಾರ ಆಗಿದ್ದರೆ, ಯಾವ ತರಹ ಬೇಕಾದರೂ ತನಿಖೆ ಮಾಡಲಿ. ಅದಕ್ಕೆ ನಮ್ಮ ಅಡ್ಡಿಯಿಲ್ಲ. 25 ಕೋಟಿ ರೂಪಾಯಿ ಕೆಲಸವಿದ್ದರೂ ಅದನ್ನು ತೆಗೆದು ಹಾಕುವಂಥ ಉದ್ದೇಶ ಏನು?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ತಾವು ಇಷ್ಟು ಆವೇಶದಿಂದ ಮಾತನಾಡಿದರೆ ಹೇಗೆ? ನಾನು ಏನು ಹೇಳಿದೆ, ನನ್ನ ಉತ್ತರ ನಿಮಗೆ ತೃಪ್ತಿಯಾಗದಿದ್ದಲ್ಲಿ ಮತ್ತೆ ಕೇಳಬಹುದು ಎಂದು ಹೇಳಿದೆ. ಈ ರೀತಿಯಾಗಿ ಮಾತನಾಡುವುದು ಸರಿಯಲ್ಲವೆಂದು ಹೇಳುತ್ತೇನೆ. ನಾನು ಏನು ಹೇಳಿದೆ, ನಿಮ್ಮ ಪ್ರಶ್ನೆಗೆ ನನ್ನ ಉತ್ತರ ತೃಪ್ತಿಯಾಗದಿದ್ದಲ್ಲಿ ಮತ್ತೆ ಪ್ರಶ್ನೆ ಕೇಳಬಹುದು ಎಂದು ಹೇಳಿದೆನೇ ಹೊರತೂ ನಿಮಗೆ ಗೌಣವಾಗಿ ಮಾತನಾಡುವ ಇಚ್ಛೆ ನನಗಿಲ್ಲ. ದಯವಿಟ್ಟು ತಾವು ಇಷ್ಟು ಆವೇಶದಿಂದ ಮಾತನಾಡಿದರೆ ಬಹಳ ಕಷ್ಟವಾಗುತ್ತದೆ. ನನಗೂ ವಯಸ್ಸಾಗಿದೆ, ಆವೇಶಕ್ಕೆ ಹೋಗುವುದು ಬೇಡ ಎಂದು ಹೇಳಿದೆ. ಮಾನ್ಯ

ರೇವಣ್ಣನವರು ಪ್ರಸ್ತಾಪಿಸಿದಂಥ ವಿಚಾರದಲ್ಲಿ, ಶಿವಮೊಗ್ಗ ವೃತ್ತ ಕಛೇರಿಯ ವ್ಯಾಪ್ತಿಯಲ್ಲಿ ಬರುವ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು ಜಿಲ್ಲೆಗಳ ಎಲ್ಲಾ ಸರ್ಕಾರಿ ಕಟ್ಟಡಗಳ ವಿದ್ಯುತ್ ಕಾಮಗಾರಿಗಳನ್ನು ನಿರ್ವಹಿಸಲು ಸುಮಾರು 45 ವರ್ಷಗಳ ಹಿಂದೆ ಲೋಕೋಪಯೋಗಿ ವಿದ್ಯುತ್ ವಿಭಾಗ, ಉಪ ವಿಭಾಗ ಶಿವಮೊಗ್ಗ ಎಂದು ಸ್ಥಾಪಿಸಲಾಗಿತ್ತು. ಈ ವಿದ್ಯುತ್ ಉಪ ವಿಭಾಗವು ನಾಲ್ಕು ಜಿಲ್ಲೆಗಳ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಕಾಮಗಾರಿಗಳನ್ನು ನಿರ್ವಹಿಸುತ್ತಿತ್ತು. ಲೋಕೋಪಯೋಗಿ ವಿದ್ಯುತ್ ಉಪ ವಿಭಾಗ ಶಿವಮೊಗ್ಗ ಕಛೇರಿಯನ್ನು ಸಿಬ್ಬಂದಿ ಸಮೇತವಾಗಿ ರಾಷ್ಟ್ರೀಯ ಹೆದ್ದಾರಿ ವಿಶೇಷ ಉಪ ವಿಭಾಗ ಎಂದು ಪುನರ್ ಪದನಾಮೀಕರಿಸಿ ಚನ್ನರಾಯಪಟ್ಟಣ ಇಲ್ಲಿಗೆ ಸ್ಥಳಾಂತರಿಸಿ ಸರ್ಕಾರ ದಿನಾಂಕ 13-08-2004 ರಲ್ಲಿ ಆದೇಶಿಸಲಾಗಿದೆ. ಇದು ಗಂಭೀರವಾಗಿ ಪರಿಗಣಿಸಬೇಕಾದ ವಿಚಾರ. ಸತತವಾಗಿ 45 ವರ್ಷಗಳಿಂದ ನಡೆಯುತ್ತಿರುವಂಥ ನಾಲ್ಕು ಜಿಲ್ಲೆಗಳಿಗೆ ಬೇಕಾಗಿರುವಂಥ ಒಂದು ವಿದ್ಯುತ್ ಉಪ ವಿಭಾಗ ಶಿವಮೊಗ್ಗದಲ್ಲಿದ್ದಾಗ ಅದನ್ನು ದಿಢೀರ್ ಆಗಿ 2004 ರಲ್ಲಿ ಆದೇಶಿಸಿ ಇದನ್ನು ಚನ್ನರಾಯಪಟ್ಟಣಕ್ಕೆ ವರ್ಗಾವಣೆ ಮಾಡಲಾಗಿತ್ತು. ವಿದ್ಯುತ್ ಕಾಮಗಾರಿಗಳು ನಿರಂತರವಾಗಿ ನಡೆಯುವಂಥ ಕಾಮಗಾರಿಗಳು ಮೇಲಾಗಿ ಶಿವಮೊಗ್ಗದಲ್ಲಿದ್ದ ವಿದ್ಯುತ್ ಉಪ ವಿಭಾಗ ನಾಲ್ಕು ಜಿಲ್ಲೆಗಳಿಗೆ ಇದ್ದಂಥ ಒಂದೇ ಒಂದು ಉಪ ವಿಭಾಗವಿದೆ. ಈ ನಾಲ್ಕು ಜಿಲ್ಲೆಗಳು ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಈ ನಾಲ್ಕು ಜಿಲ್ಲೆಗಳಿಗೆ ಸೀಮಿತವಾಗಿರುವ ಈ ಸಬ್ ಡಿವಿಜನ್ ಅಲ್ಲಿ ಕೆಲಸ ಮಾಡುತ್ತಿತ್ತು. ನಿರಂತರವಾಗಿ ಶಿವಮೊಗ್ಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯುತ್ ಉಪ ವಿಭಾಗ ಇದ್ದು, ನಾಲ್ಕು ಜಿಲ್ಲೆಗಳ ಸಾರ್ವಜನಿಕರ ಹಿತದೃಷ್ಟಿಯಿಂದ ಆಡಳಿತದ ದೃಷ್ಟಿಯಿಂದ ಅನಿವಾರ್ಯ ಹಾಗೂ ಅವಶ್ಯಕ ಕ್ರಮವಾಗಿದೆ. ಇಂಥ ಅನಿವಾರ್ಯ ಸಂದರ್ಭದಲ್ಲಿಯೂ ಕೂಡ ಶಿವಮೊಗ್ಗದಿಂದ ವಿದ್ಯುತ್ ಉಪ ವಿಭಾಗ ಬದಲಾಯಿಸಿದ್ದು ಕಾನೂನು ಬಾಹಿರ ಮತ್ತು ಸಾಮಾನ್ಯ ನ್ಯಾಯಕ್ಕೆ ವಿರುದ್ಧವಾದುದು. ಇದು ಅವಶ್ಯಕತೆ ಇಲ್ಲದೇ ಬದಲಾಯಿಸಿದೆ ಎನ್ನುವುದು ಅಲ್ಲಿ ನಮಗೆ ಕಂಡು ಬಂದಿರುವಂಥ ವಿಚಾರ. ರಾಷ್ಟ್ರೀಯ ಹೆದ್ದಾರಿ ಗುಣ ನಿಯಂತ್ರಣ ಹಾಗೂ ಕೆಲಸ ಕಾರ್ಯಗಳ ಹಿತದೃಷ್ಟಿಯಲ್ಲಿ ಕೇಂದ್ರ ಸರ್ಕಾರದ Road Transport and Highway ಕಾರ್ಯದರ್ಶಿಗಳ ಜೊತೆಗೆ ಚರ್ಚೆಯ ಪರಿಣಾಮವಾಗಿ ರಾಷ್ಟ್ರೀಯ ಹೆದ್ದಾರಿಯ ಮುಖ್ಯ ಇಂಜಿನಿಯರ್ ದಿನಾಂಕ 16-4-2003 ರಂದೇ ಈ ಕೆಳಕಾಣಿಸಿದಂತೆ ಉಪ ವಿಭಾಗಗಳ ಪರಿವರ್ತನೆ ಹಾಗೂ ವರ್ಗಾವಣೆಗೆ ಪ್ರಸ್ತಾವನೆ ಸಲ್ಲಿಸಿದ್ದರು. ಅವರು ಏನು ಸಲ್ಲಿಸಿದ್ದರು ಎಂದರೆ, ರಾಷ್ಟ್ರೀಯ ಹೆದ್ದಾರಿ ವಿಶೇಷ ವಿಭಾಗ ಬೆಂಗಳೂರು ಇದನ್ನು ರಾಷ್ಟ್ರೀಯ ಹೆದ್ದಾರಿ ಗುಣ ನಿಯಂತ್ರಣ ವಿಭಾಗ, ಚಿತ್ರದುರ್ಗ ಎಂದು ಪರಿಗಣಿಸಬೇಕು ಹಾಗೂ ರಾಷ್ಟ್ರೀಯ ಹೆದ್ದಾರಿ ವಿಶೇಷ ಗುಣ ಉಪ ವಿಭಾಗ ಹೊಸಕೋಟೆಯನ್ನು ರಾಷ್ಟ್ರೀಯ ಹೆದ್ದಾರಿ ಗುಣ ನಿಯಂತ್ರಣ ಉಪ ವಿಭಾಗ, ಬಿಜಾಪುರ ಎಂದು ಪರಿವರ್ತಿಸಲು ಸಲಹೆ ನೀಡಿದ್ದರು. ರಾಷ್ಟ್ರೀಯ ಹೆದ್ದಾರಿ ವಿಶೇಷ ಉಪ ವಿಭಾಗ, ದೊಡ್ಡ ಬಳ್ಳಾಪುರ ಇದನ್ನು ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗ, ದೇವನಹಳ್ಳಿಗೆ ಸ್ಥಳಾಂತರಿಸಲು ಅವರು ಸೂಚಿಸಿದ್ದರು. ಆದರೆ, ಅದನ್ನೆಲ್ಲಾ ಬಿಟ್ಟು ಪ್ರಸ್ತಾವನೆ ಇರುವುದು ಈ ರೀತಿ, ಆ ಮುಖ್ಯ ಇಂಜಿನಿಯರ್‌ನಿಂದ ಬಂದಿರುವಂಥ ಪ್ರಸ್ತಾವನೆ ಇದು, ಇದೆಲ್ಲವನ್ನು ಬಿಟ್ಟು ಪ್ರಸ್ತಾವನೆಗೆ

ಲೋಕೋಪಯೋಗಿ ಸಚಿವರು ಅಂದು 13-08-2004 ರಲ್ಲಿ ತಮ್ಮ ಇಚ್ಛಾನುಸಾರ ಆದೇಶ ಮಾಡಿರುವುದು ಇರುತ್ತದೆಂದು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಇದಕ್ಕೆ ಯಾವುದೇ ಹಿರಿಯ ಅಧಿಕಾರಿಗಳಿಂದ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ. ನಾನು ನೋಡಿದ್ದೇನೆ. ತಾವು ನೋಡಲಿಕ್ಕೆ ಬೇಕು ಎಂದರೆ ತಮ್ಮ ಕಾರ್ಯಾಲಯದಲ್ಲಿ ಸನ್ಮಾನ್ಯ ರೇವಣ್ಣನವರು ಹಾಗೂ ನಾವು ಒಟ್ಟಿಗೆ ಕುಳಿತು ಇದರ ಬಗ್ಗೆ ಚರ್ಚೆ ಮಾಡಬಹುದು. ಅದರಲ್ಲಿ ಅಧಿಕಾರಿಗಳಿಂದ ಏನಾದರೂ ಪ್ರಸ್ತಾವನೆ ಮಾಡಿದ್ದಾರೆಯೇ ಹೇಗೆ ಎನ್ನುವುದನ್ನು ಈ ಫೈಲ್ ತಾವು ನೋಡಿದರೆ ತಮಗೆ ಗೊತ್ತಾಗಬಹುದು. ಇದರಲ್ಲಿ ಯಾವುದೇ ರೀತಿಯ ವೈಜ್ಞಾನಿಕ ರಿಪೋರ್ಟ್ ಕೂಡ ಇಲ್ಲ. ಇಂಥ ಸಂದರ್ಭದಲ್ಲಿ ಹಾಲಿ ಇರುವಂಥ ರಾಷ್ಟ್ರೀಯ ಹೆದ್ದಾರಿ ವಲಯ ಹುನಗುಂದವನ್ನು ರಾಮನಗರಕ್ಕೆ ವರ್ಗಾವಣೆ ಮಾಡಿದ್ದಾರೆ. ರಾಷ್ಟ್ರೀಯ ಹೆದ್ದಾರಿ ದೊಡ್ಡಬಳ್ಳಾಪುರವನ್ನು ಮಂಡ್ಯಕ್ಕೆ ವರ್ಗಾವಣೆ ಮಾಡಿದ್ದಾರೆ. ಎಲೆಕ್ಟ್ರಿಕಲ್ ಉಪ ವಿಭಾಗ ಶಿವಮೊಗ್ಗದಲ್ಲಿ ಇದ್ದದ್ದನ್ನು ಚನ್ನರಾಯಪಟ್ಟಣಕ್ಕೆ ವರ್ಗಾವಣೆ ಮಾಡಿದ್ದು ಇದೆ. ಹೀಗಿರಬೇಕಾದರೆ, ಅಲ್ಲಿಯ ಕೆಲಸ ಕಾರ್ಯಗಳನ್ನು ನೋಡಿ ನಾವು ತೀರ್ಮಾನಕ್ಕೆ ಬಂದಿದ್ದೇವೆಂದು ಮುಂದೆ ನಾನು ತಮಗೆ ಹೇಳುತ್ತಿದ್ದೇನೆ. ರಾಷ್ಟ್ರೀಯ ಹೆದ್ದಾರಿ ಚನ್ನರಾಯಪಟ್ಟಣ, ಉಪ ವಿಭಾಗ ಲೋಕೋಪಯೋಗಿ ಇಲಾಖೆಯ ಜಿಲ್ಲಾ ಮುಖ್ಯ ರಸ್ತೆ ಹಾಗೂ ರಾಜ್ಯ ಹೆದ್ದಾರಿಗಳ ವಿಶೇಷ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆಯೇ ಹೊರತೂ ರಾಷ್ಟ್ರೀಯ ಹೆದ್ದಾರಿ ವಿಭಾಗ ಎಂದು ವರ್ಗಾವಣೆ ಮಾಡಿದ್ದರೂ ಸಹಿತ ರಾಷ್ಟ್ರೀಯ ಹೆದ್ದಾರಿಯ ಕೆಲಸ ಕಾರ್ಯ ಯಾವುದನ್ನು ಅಲ್ಲಿ ಮಾಡುತ್ತಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದನ್ನು ಹೊರತುಪಡಿಸಿ CRF, KRDCL ಮತ್ತು ಇತರೆ ಅನುದಾನಗಳ ವತಿಯಿಂದ ಅದನ್ನು ನೆರವೇರಿಸಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲು ಆ ಡಿವಿಜನ್ ಅನ್ನು ಉಪಯೋಗ ಮಾಡುತ್ತಿದ್ದರು. ರಾಷ್ಟ್ರೀಯ ಹೆದ್ದಾರಿ ಚನ್ನರಾಯಪಟ್ಟಣ, ಉಪ ವಿಭಾಗದ ಕಾಮಗಾರಿಗಳನ್ನು ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ. ಲೋಕೋಪಯೋಗಿ ಇಲಾಖೆ ಉಪ ವಿಭಾಗ ಚನ್ನರಾಯಪಟ್ಟಣಕ್ಕೆ 4 ಕಾಮಗಾರಿಗಳು, ಹೊಳೆನರಸೀಪುರ ಉಪ ವಿಭಾಗಕ್ಕೆ 30 ಕಾಮಗಾರಿಗಳು, ಕೆ.ಆರ್. ನಗರ ಉಪ ವಿಭಾಗಕ್ಕೆ 2 ಕಾಮಗಾರಿಗಳು, ಪಾಂಡವಪುರ ಉಪ ವಿಭಾಗಕ್ಕೆ 1 ಕಾಮಗಾರಿ. ಇಲ್ಲಿ 30 ಕಾಮಗಾರಿಗಳು ಇವೆ ಎಂದು ಹೇಳಿದಾಗ, ತಮ್ಮ ಮೂಲಕ ಮಾನ್ಯ ರೇವಣ್ಣನವರ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ, ಎಲ್ಲಾ ವಿಭಾಗದಲ್ಲೂ ಸಹಿತ ಮೂರರಿಂದ ನಾಲ್ಕು ಮಾತ್ರ Assistant Engineer ಮಂಜೂರಾತಿಯ ಹುದ್ದೆಗಳಿರುತ್ತವೆ. ಆದರೆ, ಇಲ್ಲಿ ಏಳು ಹುದ್ದೆಗಳು ಇವೆ. ಏಳು ಹುದ್ದೆಗಳು ಇರುವುದರಿಂದ ಯಾವುದೇ ಕೆಲಸ ಕಾರ್ಯ ಮಾಡಲಿಕ್ಕೆ ಅಡಚಣೆಯಾಗುವುದಿಲ್ಲ ಎನ್ನುವುದನ್ನೂ ಸಹಿತ ನಾನು ಸನ್ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಹಿಂದಿನ ರಾಷ್ಟ್ರೀಯ ಹೆದ್ದಾರಿ ವಿಶೇಷ ವಿಭಾಗ ಚನ್ನರಾಯಪಟ್ಟಣದ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳಿಗೆ ಯಾವುದೇ ಪ್ರಗತಿಗೆ ತೊಂದರೆಯಾಗುವುದಿಲ್ಲ ಎಂದು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕಾಮಗಾರಿಗಳನ್ನು ಚನ್ನರಾಯಪಟ್ಟಣ ವಿಶೇಷ ವಿಭಾಗದಿಂದ ಹಂಚಿಕೆ ಮಾಡಲಾಗಿದೆ. ಹಾಗೂ

ವರ್ಕ್‌ಲೋಡ್‌ಗೆ ಬೇಕಾಗಿರುವಂಥ ವ್ಯವಸ್ಥೆಯನ್ನು ಸಹಿತ ಕೈಗೊಳ್ಳಲಾಗಿದೆ ಮತ್ತು ಶಿರಾಡಿ ಘಾಟ್‌ನ ಕೆಲಸ ಈಗ ಮುಗಿದಿದೆ. ಸನ್ಮಾನ್ಯ ಸಚಿವರು ಆರ್ಡರ್ ಮಾಡಬೇಕಾದಾಗ ಬಾಹುಬಲಿಯ ಕ್ಷೇತ್ರ ಅಭಿವೃದ್ಧಿ ಪಡಿಸುವ ಸಲುವಾಗಿ ಈ ಸ್ಥಳವನ್ನು ಸ್ಥಳಾಂತರಿಸಿದೆ ಎನ್ನುವ ಮಾತನ್ನು ಹೇಳಿದರು. ಬಾಹುಬಲಿ ಕ್ಷೇತ್ರದಲ್ಲಿ ಆಗಬೇಕಾದ ಅಭಿವೃದ್ಧಿ ಕೆಲಸ ಕಾರ್ಯಗಳು ಎಲ್ಲಾ ಮುಗಿದಿರುವುದರಿಂದ ಇವತ್ತು ಅದರ ವರ್ಗಾವಣೆ ಮಾಡುವುದರಿಂದ ಯಾವುದೇ ಸಮಸ್ಯೆಯಾಗುವುದಿಲ್ಲ ಎನ್ನುವುದನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುವ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ವಿಷಯವನ್ನು ಬೇರೆ ದಿಕ್ಕಿಗೆ ತಿರುಗಿಸುತ್ತಿದ್ದಾರೆ. ದಯಮಾಡಿ ನೀವು ಸರ್ಕಾರಿ ಆದೇಶವನ್ನು ಸ್ವಲ್ಪ ಓದಬೇಕು. ಏಕೆಂದರೆ, ಮಾನ್ಯ ಉದಾಸಿ ಸಾಹೇಬರು ಹಿಂದೆ ಆರ್.ಡಿ.ಪಿ.ಆರ್. ಮತ್ತು ಲೋಕೋಪಯೋಗಿ ಸಚಿವರಾಗಿ ಕೆಲಸ ಮಾಡಿರತಕ್ಕಂಥದ್ದನ್ನು ನಾನು ನೋಡಿದ್ದೇನೆ. ನಾನೇನು ಅವರಷ್ಟು ಬುದ್ಧಿವಂತನಲ್ಲ. ತಾವು 11ನೇ ತಾರೀಖಿನ ದಿವಸ ಮಾಡಿರತಕ್ಕಂಥ ಸರ್ಕಾರದ ಆದೇಶದಲ್ಲಿನ preamble ನಲ್ಲಿ ಏನಿದೆ ಎಂಬುದನ್ನು ದಯಮಾಡಿ ತಾವು ಓದಬೇಕು. ಅದನ್ನು ನಾನು ಇಲ್ಲಿ ಓದುವುದಕ್ಕೆ ಬಯಸುತ್ತೇನೆ.

"ಮೊದಲನೆಯದು, ಓದಲಾದ ಎರಡನೇ ಪತ್ರದಲ್ಲಿನ ಮುಖ್ಯ ಇಂಜಿನಿಯರ್ ಸಂಪರ್ಕ (ಕಟ್ಟಡ) ದಕ್ಷಿಣ, ಬೆಂಗಳೂರು, ಇವರು ಸರ್ಕಾರಕ್ಕೆ ಪ್ರಸ್ತಾಪನೆ ಸಲ್ಲಿಸಿ ಶಿವಮೊಗ್ಗ ವೃತ್ತದ ಅಡಿಯಲ್ಲಿ ವಿದ್ಯುತ್ ಕಾಮಗಾರಿಯನ್ನು ನಿರ್ವಹಿಸುವುದಕ್ಕೆ ಬೆಂಗಳೂರು ವಿದ್ಯುತ್ ವಿಭಾಗದ ಒಂದು ಕಿರಿಯ ಇಂಜಿನಿಯರ್ (ವಿದ್ಯುತ್) ನಿಯೋಜಿಸಲು ತಿಳಿಸುತ್ತಾ,"

ಅಂದರೆ, ಶಿವಮೊಗ್ಗದಲ್ಲಿ ಎಲೆಕ್ಟ್ರಿಕಲ್ ಕೆಲಸ ಮಾಡುವುದಕ್ಕೆ ಎಲೆಕ್ಟ್ರಿಕಲ್ ಇಂಜಿನಿಯರ್‌ರನ್ನು ನೇಮಕ ಮಾಡುತ್ತಾರೆ. ಆದ್ದರಿಂದ, ಸಿವಿಲ್ ಇಂಜಿನಿಯರ್‌ರನ್ನು ಈ ಕೆಲಸ ಮಾಡುವುದಕ್ಕೆ ಯಾರೂ ನೇಮಕ ಮಾಡುವುದಿಲ್ಲ. ಅವತ್ತಿನ ದಿವಸ ನನಗೂ ಕೂಡ ಸ್ವಲ್ಪ ಗೊತ್ತಿದ್ದರಿಂದಲೇ ಇದನ್ನು ಮಾಡಿರುವುದು. ಅಲ್ಲಿ ಮಾಡಿರುವುದು ಸಾಕಾಗುವುದಿಲ್ಲ ಆದ್ದರಿಂದ ಸಬ್ ಡಿವಿಜನ್ ಬೇಕೆಂದು ಮಾಡಲಾಗಿತ್ತು. ಸಬ್ ಡಿವಿಜನ್‌ನಲ್ಲಿ ಸಿವಿಲ್ ಇಂಜಿನಿಯರ್‌ಗಳನ್ನು ಇಟ್ಟುಕೊಳ್ಳುವುದಿಲ್ಲ. ಅವರನ್ನು ನೀವು ವಾಪಸು ಬೇರೆ ಕಡೆಗೆ ಹಾಕುತ್ತೀರಿ. ಸಬ್ ಡಿವಿಜನ್‌ನ್ನು ಮಾಡಬೇಡಿ ಎಂದು ನಾನು ನಿಮಗೆ ಪ್ರಶ್ನೆ ಮಾಡುತ್ತಿಲ್ಲ. ಕೆಳಗೆ ಏನು ಹೇಳಿದ್ದಾರೆಂಬುದನ್ನು ಮತ್ತೆ ಸಬೆಯ ಗಮನಕ್ಕೆ ತರುತ್ತೇನೆ.

"ಮುಖ್ಯ ಇಂಜಿನಿಯರ್ ರಾಷ್ಟ್ರೀಯ ಹೆದ್ದಾರಿ ಬೆಂಗಳೂರು, ಇವರು ಮೇಲೆ ಓದಲಾದ 3ನೇ ಟಿಪ್ಪಣಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗ, ಸಕಲೇಶಪುರ ಹಾಗೂ ಚನ್ನರಾಯಪಟ್ಟಣಕ್ಕೆ ಸಂಬಂಧಿಸಿದಂತೆ ಕಾರ್ಯಭಾರ ವಿವರಗಳನ್ನು ಸಲ್ಲಿಸುತ್ತಾ ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗ ಸಕಲೇಶಪುರ ಉಪ ವಿಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ 48 ರಲ್ಲಿ 243 ಕಿ.ಮೀ. ನಿಂದ 260 ಕಿ.ಮೀ. ವರೆಗಿನ ರಸ್ತೆಯ ಮೇಲುಸ್ತುವಾರಿ ಕಾಮಗಾರಿ ದುರಸ್ತಿಯ ನಿರ್ವಹಣೆ, ಸದರಿ ಕಾಮಗಾರಿಗಳ ಯೋಜನೆ ಲೆಕ್ಕ ಶೀರ್ಷಿಕೆ

ಅಡಿಯಲ್ಲಿ ಸುಮಾರು 16 ಕೋಟಿ 20 ಲಕ್ಷ ರೂಪಾಯಿಗಳ ಕಾಮಗಾರಿ ಪ್ರಗತಿಯಲ್ಲಿದ್ದು, 226 ಕಿ.ಮೀ. ನಿಂದ 260 ಕಿ.ಮೀ. ವರೆಗಿನ ರಸ್ತೆ ಶಿರಾಡಿಘಾಟ್‌ನಲ್ಲಿ ಹಾದು ಹೋಗಿದ್ದು, ಇತ್ತೀಚೆಗೆ ಈ ಉದ್ಯೋಗ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡು,"

ಇದರಲ್ಲಿ 25 ಕೋಟಿ ರೂಪಾಯಿಗಳಷ್ಟು ಕೆಲಸವಿದೆ ಎಂದು ತಾವೇ ಹೇಳಿದ್ದೀರಿ.

"ಎರಡನೆಯದಾಗಿ, ಮತ್ತೆ ಲೋಕೋಪಯೋಗಿ ಇಲಾಖೆ ಮಾರ್ಚ್ 2009 ರಲ್ಲಿ ರಾಷ್ಟ್ರೀಯ ಹೆದ್ದಾರಿ ವಿಶೇಷ ವಿಭಾಗ ಚನ್ನರಾಯಪಟ್ಟಣದ ಉಪ ವಿಭಾಗವು ಲೋಕೋಪಯೋಗಿ ಇಲಾಖೆಯ ಜಿಲ್ಲಾ ಮುಖ್ಯರಸ್ತೆ, ರಾಜ್ಯ ಹೆದ್ದಾರಿ, ಸಿ.ಆರ್.ಎಫ್., ಕೆ.ಆರ್.ಡಿ.ಸಿ.ಎಲ್. ಮತ್ತೆ ಇತರೆ ಅನುದಾನಗಳ ಮತಿಯಿಂದ ನಿರ್ವಹಿಸಲಾಗುತ್ತಿದ್ದ, ಸದರಿ ಉಪ ವಿಭಾಗಕ್ಕೆ ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ 25 ಕೋಟಿ ರೂಪಾಯಿಗಳ ಅಂದಾಜು ಮೊತ್ತದ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈ ಕಾಮಗಾರಿ ಮಾರ್ಚ್ 2009 ರ ಅಂತ್ಯದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ."

ಇಷ್ಟೆಲ್ಲಾ ಹೇಳಿ ನೀವು ಸರ್ಕಾರಿ ಆದೇಶದಲ್ಲಿ ಏನು ಹೇಳಿರುತ್ತೀರೆಂದರೆ, ಇದಕ್ಕೆ ನೀವೇ pre-amble ಹಾಕಿರುತ್ತೀರಿ. ನೀವು ಹೇಳಿದ ಮೇಲೆ ಶಿವಮೊಗ್ಗಕ್ಕೆ ಹಾಕಿ ಎಂದು ಈ ಆದೇಶವನ್ನು ಹೊರಡಿಸುತ್ತೀರಿ. ಇದರ ಬಗ್ಗೆ ನಾನು ಮನವರಿಕೆ ಮಾಡಿಲ್ಲ. ರಾಷ್ಟ್ರೀಯ ಹೆದ್ದಾರಿಯ ಮುಖ್ಯ ಇಂಜಿನಿಯರ್‌ರವರು ಮನವರಿಕೆ ಮಾಡಿಕೊಟ್ಟಿದ್ದಾರೆ. ಮುಖ್ಯ ಇಂಜಿನಿಯರ್‌ರವರು ಸಿ.ಆರ್.ಎಫ್. ಮಾಡಿಕೊಟ್ಟಿದ್ದಾರೆ. ಇದೆಲ್ಲಾ ಮಾಡಿಕೊಟ್ಟ ಮೇಲೆ ತಾವು ಏನು ಹೇಳಿರುತ್ತೀರೆಂದರೆ, "ಶಿವಮೊಗ್ಗದ ವೃತ್ತದ ಅಡಿಯಲ್ಲಿ ವಿದ್ಯುತ್ ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಬೆಂಗಳೂರು ವಿದ್ಯುತ್ ಉಪ ವಿಭಾಗದಿಂದ ಒಬ್ಬ ಕಿರಿಯ ಇಂಜಿನಿಯರ್ (ವಿದ್ಯುತ್) ಅವರನ್ನು ನಿಯೋಜಿಸಲಾಗಿದೆ. ಹಾಲಿ ಶಿವಮೊಗ್ಗ ವೃತ್ತದ ಅಡಿಯಲ್ಲಿ 15 ಕಾಮಗಾರಿಗಳಿದ್ದು, 7 ಕೋಟಿ ರೂಪಾಯಿ ಕೆಲಸ ಇದೆ, ಅದಕ್ಕೆ ಡಮ್ಮಿ ಇರತಕ್ಕಂಥ ಒಂದು ಸಬ್ ಡಿವಿಜನ್ ಅನ್ನು ಕೊಡಿ ಎಂದು ಪತ್ರ ಬರೆಯಲಾಗಿದೆ. ಚನ್ನರಾಯಪಟ್ಟಣದಲ್ಲಿ ಮಾಡಿ ಎಂದು ಪತ್ರ ಬರೆದಿಲ್ಲ. ಮಾನ್ಯ ಸಭಾಧ್ಯಕ್ಷರಿಗೆ ಈ ಪತ್ರವನ್ನು ಕಳುಹಿಸಿಕೊಡುತ್ತೇನೆ. ತಾವು ಇದನ್ನು ಓದಿ. ನಾನು ಈ ಮಾಹಿತಿಯನ್ನು Right to Information Act ಮೂಲಕ ತೆಗೆದುಕೊಂಡಿದ್ದೇನೆ. ಏಕೆಂದರೆ, ಯಾವುದಾದರೂ ಪತ್ರ ಹೋಗಿ ಬಿಡುತ್ತದೆಂಬುದು ಇವರ ಪ್ರಧಾನ ಕಾರ್ಯದರ್ಶಿಗೆ ಇದೆ. ಯಾವ ಪತ್ರವನ್ನು ಸೇಫ್ಟಿಯಾಗಿ ಇಟ್ಟುಕೊಳ್ಳಬೇಕೆಂಬುದನ್ನು ನಿಮ್ಮ ಪ್ರಧಾನ ಕಾರ್ಯದರ್ಶಿಗೆ ಹೇಳಿ. ಎಲ್ಲೆಲ್ಲಿಂದ ಪತ್ರಗಳನ್ನು ಯಾವ ರೀತಿಯಾಗಿ ತರಿಸಬೇಕೆಂಬುದು ನನಗೆ ಗೊತ್ತಿದೆ. ನಾನು 20 ವರ್ಷದಿಂದ ರಾಜಕೀಯದಲ್ಲಿದ್ದೇನೆ. ನಾನು ಜಿಲ್ಲಾ ಪರಿಷತ್ ಮತ್ತು ತಾಲೂಕು ಪಂಚಾಯತಿ ಸಮಿತಿಯ ಅಧ್ಯಕ್ಷಸ್ಥಾನದಲ್ಲಿ ಕೆಲಸ ಮಾಡಿದ್ದೇನೆ. ಮತ್ತೆ 3 ಸಾರಿ ಶಾಸಕನಾಗಿ ಆಯ್ಕೆಯಾಗಿ ಮಂತ್ರಿಯಾಗಿ ಕೆಲಸ ಮಾಡಿರುವುದರಿಂದ ಎಲ್ಲೆಲ್ಲಿ ಪತ್ರ ತರಿಸಬೇಕೆಂಬುದು ನನಗೆ ಗೊತ್ತಿದೆ. Right to Information Act ನಿಂದ ಪಡೆದುಕೊಂಡ ಪತ್ರವನ್ನು ಇಟ್ಟುಕೊಂಡು ನಾನು ಮಾತನಾಡುತ್ತಿದ್ದೇನೆ. ಇದೇನಾದರೂ ಬೇರೆ ಪತ್ರವಾಗಿದ್ದರೆ, ರೇವಣ್ಣ ಏನೋ ತಿದ್ದಿರಬಹುದೆಂಬುದು ಆಗುವುದು ಬೇಡವೆಂದು Right to Information Act ಮೂಲಕ

ಈ ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ಪ್ರಧಾನ ಕಾರ್ಯದರ್ಶಿಯವರನ್ನು ಇಟ್ಟುಕೊಂಡು ತಾವು ಹೊಡೆಸುತ್ತಿದ್ದೀರಿ. ಅವರಿಗೆ ತಾಕತ್ ಇದ್ದರೆ ಎಷ್ಟು ದಿವಸ ಹೊಡೆಯುತ್ತಾರೆಯೋ ಹೊಡೆಯಲಿ ನಾನು ನೋಡುತ್ತೇನೆ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಅವರ ಮುಖ್ಯ ಇಂಜಿನಿಯರ್‌ರವರು ಬರೆದಿರುವ ಪತ್ರದ ಪ್ರತಿಯನ್ನು ನಿಮಗೆ ಕೊಡಿಸುತ್ತೇನೆ. ತಾವು ಅದನ್ನು ದಯಮಾಡಿ ಓದಿ. ನಾನು ಹೇಳುವುದೇನೆಂದರೆ, 25 ಕೋಟಿ ರೂಪಾಯಿ ಕೆಲಸವಿರುವುದರಿಂದ, ಡಮ್ಮಿ ಇರತಕ್ಕಂಥದ್ದು ಹಾಕಿ ಎಂದು ಹೇಳಿದರೆ, ಚನ್ನರಾಯಪಟ್ಟಣದಲ್ಲಿರತಕ್ಕಂಥದ್ದನ್ನು ತೆಗೆಯತಕ್ಕಂಥದ್ದು ಏನಿತ್ತು? ಇದು ರಾಜಕೀಯ ದ್ವೇಷವಲ್ಲವೇ? ಆದ್ದರಿಂದ, ನಾನು ಈಗ ಹೇಳುವುದೇನೆಂದರೆ, ಚನ್ನರಾಯಪಟ್ಟಣದಲ್ಲಿರುವುದನ್ನು ಮುಂದುವರಿಸಿ... ನಾನು ಹೇಳುವುದನ್ನು ಕೇಳಿ. ಬಾಕಿಯದು ಆಮೇಲೆ ಚರ್ಚೆ ಮಾಡೋಣ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ. ಈಗ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಅವರೆಲ್ಲರೂ ಕುಳಿತುಕೊಳ್ಳುವುದಕ್ಕೆ ತಾವು ಹೇಳಬೇಕು. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ರೇಣುಕಾಚಾರ್ಯರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಇದು ಗಮನ ಸೆಳೆಯುವ ಸೂಚನೆ, ಅನಾವಶ್ಯಕವಾಗಿ ಎಲ್ಲರೂ ಮಾತನಾಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಕೆ. ಜಿ. ಕುಮಾರಸ್ವಾಮಿ : ಶಿವಮೊಗ್ಗದಲ್ಲಿರತಕ್ಕಂಥದ್ದನ್ನು ಅನಾವಶ್ಯಕವಾಗಿ ಇತ್ತ ಕಡೆ ತೆಗೆದುಕೊಂಡಿದ್ದಾರೆ. ಇದು ಯಾವ ಕಾರಣಕ್ಕೆ ಆಗಿದೆ ಎಂಬುದನ್ನು ಅವರು ಹೇಳಬೇಕಲ್ಲವೇ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಅನಾವಶ್ಯಕವಾಗಿ ಅವರು ಜಗಳ ಮಾಡುವುದಾದರೆ ಮಾಡಲಿ, ಕೂಗಾಡುವುದಕ್ಕೆ ನಾವು ಕೂಡ ತಯಾರಿದ್ದೇವೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರೇಣುಕಾಚಾರ್ಯ ಮತ್ತು ಮಾನ್ಯ ತಿಪ್ಪೆಸ್ವಾಮಿಯವರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಜಿ. ಕುಮಾರಸ್ವಾಮಿ : ಶಿವಮೊಗ್ಗದಿಂದ ಆಚೆಗೆ ಏಕೆ ತೆಗೆದುಕೊಂಡು ಹೋದರು?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಇದು ಒಳ್ಳೆಯ ಬೆಳವಣಿಗೆಯಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ರೇಣುಕಾಚಾರ್ಯರೆ, ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಿ. ನಿಮಗೂ ಕೂಡ ಮಾತನಾಡುವುದಕ್ಕೆ ಇನ್ನೊಂದು ಸಾರಿ ಅವಕಾಶ ಕೊಡುತ್ತೇನೆ. ಈಗ ಎಲ್ಲರೂ ಕುಳಿತುಕೊಳ್ಳಿ. ಈಗ ಮಾನ್ಯ ಹೆಚ್.ಕೆ. ಕುಮಾರಸ್ವಾಮಿಯವರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ನಂತರ ನೀವುಗಳು ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ನಾವು ಕೇಳುತ್ತಿರುವಂಥದ್ದು ಏನೆಂದರೆ, ಸರ್ಕಾರ ಹೇಳಿರತಕ್ಕಂಥ ಪ್ರಸ್ತಾವನೆಯಲ್ಲಿ ಒಂದಿದೆ. ಆದೇಶದಲ್ಲಿ ಮತ್ತೊಂದು ಇದೆ. ಮಾನ್ಯ ರೇವಣ್ಣನವರು ಹೇಳಿರುವಂತೆ, ನಮ್ಮ ಚನ್ನರಾಯಪಟ್ಟಣದಲ್ಲಿದ್ದಂಥದ್ದು ರಾಷ್ಟ್ರೀಯ ಹೆದ್ದಾರಿ ಸಿವಿಲ್ ವಿಭಾಗ, ಈಗ ಸೃಜನೆ ಮಾಡಿರತಕ್ಕಂಥದ್ದು ವಿದ್ಯುತ್ ವಿಭಾಗ. ಆದೇಶದಲ್ಲಿ ಏನು ಹೇಳಿರುತ್ತಾರೆಂದರೆ, ಶಿವಮೊಗ್ಗದಲ್ಲಿ ನಡೆಯುತ್ತಿರುವ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಗಳ ಅಂದಾಜು ವೆಚ್ಚ 500 ಲಕ್ಷ ರೂಪಾಯಿಗಳ ವಿದ್ಯುದ್ದೀಕರಣ ಕಾಮಗಾರಿ ಬಾಕಿ ಇದ್ದು, ಅಂದರೆ, 5 ಕೋಟಿ ರೂಪಾಯಿಗಳಷ್ಟು ಮಾತ್ರ ಬಾಕಿ ಇರತಕ್ಕಂಥದ್ದು, ಮತ್ತೆ ಅದೇ ಪ್ಯಾರಾದಲ್ಲಿ ಮುಂದೆ ಏನು ಹೇಳುತ್ತಾರೆಂದರೆ, ಈ ವೃತ್ತದಲ್ಲಿ ಕಾಮಗಾರಿಗಳನ್ನು ಕೈಗೊಂಡು ಸುಮಾರು 25 ಕೋಟಿ ಅಂದಾಜು ಮೊತ್ತದ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈ ಕಾಮಗಾರಿಗಳು ಮಾರ್ಚ್ 2009 ಅಂತ್ಯದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಅವರೇ ಹೇಳುತ್ತಿದ್ದಾರೆ. 25ಕೋಟಿ ರೂಪಾಯಿ ಬಾಕಿ ಇದೆ ಎಂದೂ ಸಹ ಹೇಳುತ್ತಿದ್ದಾರೆ. ಆದರೆ, ಅಲ್ಲಿ ಕೇವಲ 5 ಕೋಟಿ ರೂಪಾಯಿದು ಇದೆ. ಬೇಕಾದರೆ, ಅವರು ಹೊಸದಾಗಿ ಸೃಜನೆ ಮಾಡಿ ಅಲ್ಲಿಯೂ ಕೂಡ ಕೆಲಸ ಮಾಡಲಿ. ನಮ್ಮದೇನೂ ತಕರಾರು ಇಲ್ಲ. ಏಕೆಂದರೆ, ಅದು ಮಾನ್ಯ ಮುಖ್ಯಮಂತ್ರಿಯವರ ಕ್ಷೇತ್ರವಾಗಿರುವುದರಿಂದ ಅಲ್ಲಿಯೂ ಕೂಡ ಕೆಲಸ ಆಗಲಿ. ಆದರೆ, ಇಲ್ಲಿ ಇಷ್ಟೊಂದು ಕಾಮಗಾರಿಗಳು

ಇರುವಾಗ ಮತ್ತೆ ತಾವೇ ಹೇಳಿರುವಂತೆ 25 ಕೋಟಿ ರೂಪಾಯಿಗಳ ಕಾಮಗಾರಿಗಳು ಬಾಕಿ ಇರುವಾಗ ತಾವೇಕೆ ಸ್ಥಳಾಂತರ ಮಾಡಿದ್ದೀರಿ? ಇದರ ಹಿಂದಿನ ಉದ್ದೇಶ ಏನಿದೆ?

(ಗೊಂದಲ)

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ನಿಯಮಾವಳಿಗಳನ್ನು ಪಾಲನೆ ಮಾಡುವುದಕ್ಕೆ ಅವರಿಗೆ ಹೇಳಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ರೇಣುಕಾಚಾರ್ಯರೆ, ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಉದಾಸಿಯವರು ಉತ್ತರ ಕೊಡುತ್ತಾರೆ. ಮಾನ್ಯ ಹೆಚ್.ಕೆ. ಕುಮಾರಸ್ವಾಮಿಯವರೆ ತಾವು ಮುಂದುವರಿಸಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಇವರಾ ಅಥವಾ ಅವರಾ ಎಂಬುದನ್ನು ದಯಮಾಡಿ ಹೇಳಬೇಕು.

(ಗೊಂದಲ)

ಅಧ್ಯಕ್ಷರು : ಅವರು ಈಗ ಮಾತನಾಡುತ್ತಿದ್ದಾರೆ. ನಾನು ಬೇರೆಯವರಿಗೆ ಅವಕಾಶ ಕೊಡುವುದಿಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಅವರಿಗೆ ಹೇಳುತ್ತೇನೆ, ನೀವು ಕುಳಿತುಕೊಳ್ಳಿ. ಮಾನ್ಯ ರೇಣುಕಾಚಾರ್ಯರೆ, ಮಾನ್ಯ ಮಂತ್ರಿಯವರು ಉತ್ತರ ಕೊಡುತ್ತಾರೆ, ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಕುಮಾರಸ್ವಾಮಿಯವರೆ, ತಾವು ಮಾತನಾಡಿ ಮುಗಿಸಿ. ಆನಂತರ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಧ್ಯದಲ್ಲಿ ಯಾರು intervene ಮಾಡಬೇಡಿ. ಅವರು ಮತ್ತು ನೀವುಗಳೆಲ್ಲರೂ ಸಮರ್ಥರಿದ್ದೀರಿ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಇದು ಗಮನಸೆಳೆಯುವ ಸೂಚನೆ, ಇದಕ್ಕೆ ಅವಧಿ ನಿರ್ದಿಷ್ಟವಾಗಿರುತ್ತದೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಉತ್ತರ ಕೊಡುವುದಕ್ಕೆ ಬಹಳ ಹಂಬಲಿಸುತ್ತಿದ್ದಾರೆ. ಅವರಿಗೆ ಆ ರೀತಿಯಾದ ಸಮಯ ಬಂದಾಗ ಆ ಕೆಲಸವನ್ನು ಅವರು ಮಾಡಲಿ. ಚನ್ನರಾಯಪಟ್ಟಣದಲ್ಲಿರತಕ್ಕಂಥದ್ದನ್ನು ಅಲ್ಲಿಯೇ ಉಳಿಸಿ ಅಲ್ಲಿ ಬೇಕಾದರೆ ಹೊಸದಾಗಿ ಮಾಡಲಿ. ಆದರೆ, ದಯಮಾಡಿ ಚನ್ನರಾಯಪಟ್ಟಣದಲ್ಲಿರುವುದನ್ನು ಹಾಗೆಯೇ ಉಳಿಸಬೇಕೆಂದು ಕೇಳಿಕೊಳ್ಳುತ್ತೇವೆ.

1-00 pm

ಅಧ್ಯಕ್ಷರು : ಮಾನ್ಯ ಶಿವಲಿಂಗೇಗೌಡರೆ ತಾವು ಮಾತನಾಡಿ.

(ಗೊಂದಲ)

ಅಧ್ಯಕ್ಷರು : ರೇಣುಕಾಚಾರ್ಯರವರೆ, ತಾವು ಸ್ವಲ್ಪ ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಅವರೇನು ಸರ್ ಮಧ್ಯದಲ್ಲಿ ಮಾತನಾಡುತ್ತಾರೆ. ಅವರು ಸಹಿ ಮಾಡಿದ್ದರೂ ಮಾತನಾಡಲು ಅವಕಾಶ ಕೊಡುತ್ತಿಲ್ಲವಲ್ಲ. ಇದೇನು?

ಅಧ್ಯಕ್ಷರು : ನಾನು ಅವರನ್ನು ಕೂರಿಸುತ್ತೇನೆ. ತಾವು ಕುಳಿತುಕೊಳ್ಳಿ. ರೇಣುಕಾಚಾರ್ಯರವರೆ, ತಾವು ಸುಮ್ಮನೆ ಕುಳಿತುಕೊಳ್ಳಿ. ಉತ್ತರವನ್ನು ಕೊಡಲು ಸಚಿವರು ಇದ್ದಾರೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಸಹಿ ಹಾಕಿರುವವರೂ ಮಾತನಾಡಬಾರದು ಎಂದರೆ ಹೇಗೆ? ಇದು ಸರಿಯಲ್ಲ. ಸಹಿ ಮಾಡಿದವರು ಮಾತನಾಡಬಾರದೇ?

(ಗೊಂದಲ)

ಅಧ್ಯಕ್ಷರು : ಯಾರೂ ಪರಸ್ಪರ ಮಾತನಾಡಬೇಡಿ. ರೇಣುಕಾಚಾರ್ಯರವರೆ, ತಾವು ಸುಮ್ಮನೆ ಕೂರಿ. ಏಕೆ ಎಮೋಷನಲ್ ಆಗುತ್ತೀರಿ? ಇದು ಎಮೋಷನಲ್ ಆಗುವಂಥ ವಿಚಾರವಲ್ಲ.

(ಗೊಂದಲ)

(ಈ ಹಂತದಲ್ಲಿ ಜಾತ್ಯಾತೀತ ಜನತಾದಳ ಪಕ್ಷದ ಸದಸ್ಯರು ಧರಣಿ ಮಾಡಲು ಬಾವಿಗೆ ಬಂದರು)

ಅಧ್ಯಕ್ಷರು : ಈ ರೀತಿ ಧರಣಿ ಮಾಡುವುದು ಸರಿಯಲ್ಲ. ಇದು ಧರಣಿ ಮಾಡುವಂಥ ವಿಚಾರವಲ್ಲ. ಕೇಳುವುದಿದ್ದರೆ ಸ್ಪಷ್ಟೀಕರಣ ಕೇಳಿ.

ಶ್ರೀ ಎಂ. ಪಿ. ರೇಣುಕಾಚಾರ್ಯ : ಇದು ನಾಚಿಕೆಗೇಡು. ಅವರಿಗೆ ಚರ್ಚೆ ಮಾಡಲು ಆಸಕ್ತಿ ಇಲ್ಲ.

ಅಧ್ಯಕ್ಷರು : ತಾವು ಸುಮ್ಮನೆ ಕುಳಿತುಕೊಳ್ಳಿ. ನೀವು ಏಕೆ ಎಮೋಷನ್ ಆಗುತ್ತೀರಿ?

(ಗೊಂದಲ)

ಅಧ್ಯಕ್ಷರು : ವಿರುಪಾಕ್ಷಪ್ಪನವರೇ, ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ತಾವುಗಳು ಅಲ್ಲಿ ನಿಂತು ಮಾತನಾಡಬೇಡಿ. ತಾವು ಧರಣಿಗೆ ಬಂದಿದ್ದೀರಿ. ನಾನು ಬೇರೆಯವರಿಗೆ ಮಾತನಾಡಲು ಅವಕಾಶ ಕೊಡುವುದಿಲ್ಲ. ಮಾನ್ಯ ಶಿವಲಿಂಗೇಗೌಡರೇ ಸಹಿ ಮಾಡಿರುವ ನಿಮಗೆ ಅವಕಾಶ ಕೊಡುತ್ತೇನೆ. ನಿಮ್ಮ ಸ್ಥಳಕ್ಕೆ ಹೋಗಿ ಕೇಳಿ. ನಿಮಗೆ ಸರ್ಕಾರದಿಂದ ಉತ್ತರ ಬೇಕೋ ಅಥವಾ ಧರಣಿ ಬೇಕೋ ಹೇಳಿ? ಬಾವಿಯಲ್ಲಿ ನಿಂತು ಮಾತನಾಡಬಾರದು. ಸಚಿವರಾದ ಉದಾಸಿಯವರು ಉತ್ತರ ಕೊಡುತ್ತಾರೆ. ಅವರು ಸಮರ್ಥರಿದ್ದಾರೆ. ಯಾರೂ ನಡುವೆ intervene ಮಾಡಬೇಡಿ. ಯಾರು

ಸಹಿ ಮಾಡಿದ್ದಾರೋ ಅವರು ಸ್ಪಷ್ಟೀಕರಣ ಕೇಳಿ ನಾನು allow ಮಾಡುತ್ತೇನೆ. ದಯಮಾಡಿ ಎಲ್ಲರೂ ನಿಮ್ಮ ನಿಮ್ಮ ಸ್ಥಾನಕ್ಕೆ ಹೋಗಿ.

(ಧರಣಿ ನಿರತ ಸದಸ್ಯರೆಲ್ಲಾ ಅವರವರ ಸ್ಥಾನಕ್ಕೆ ಹೋದರು)

ಅಧ್ಯಕ್ಷರು : ದಯವಿಟ್ಟು ಆಡಳಿತ ಪಕ್ಷದಲ್ಲಿರುವವರು ಯಾರು intervene ಮಾಡುವುದಕ್ಕೆ ಹೋಗಬೇಡಿ. ಸಚಿವರಾದ ಉದಾಸಿಯವರು ಸಮರ್ಥರಿದ್ದಾರೆ. ಅವರು ಉತ್ತರ ಕೊಡುತ್ತಾರೆ. ಈಗ ಶಿವಲಿಂಗೇಗೌಡರೇ, ತಾವು ಮಾತನಾಡಿ.

(ಗೊಂದಲ)

ಶ್ರೀ ಕೆ. ಎಂ. ಶಿವಲಿಂಗೇಗೌಡ (ಅರಸೀಕೆರೆ) : ಸನ್ಮಾನ್ಯ ಅಧ್ಯಕ್ಷರೆ, ಉಪ - ವಿಭಾಗವನ್ನು ಹಸ್ತಾಂತರ ಮಾಡಿರತಕ್ಕಂತಹ ವಿಚಾರದಲ್ಲಿ ಬಂದಿರತಕ್ಕಂತಹ ಈ ಪರಿಸ್ಥಿತಿಯಲ್ಲಿ, ಹಿಂದೆ ಶಿವಮೊಗ್ಗದಲ್ಲಿತ್ತೋ ಚನ್ನರಾಯನಪಟ್ಟಣದಲ್ಲಿತ್ತೋ ಅದು ನಮಗೆ ಗೊತ್ತಿಲ್ಲ. ಆದರೆ ಯಾವ ಉಪ-ವಿಭಾಗದಲ್ಲಿ ಕಾಮಗಾರಿಗಳು ಸ್ಥಗಿತಗೊಂಡಿರುತ್ತವೆ, ಬಹುಶಃ ಅಲ್ಲಿ ಕಾಮಗಾರಿಗಳ ಲಭ್ಯತೆ ಇಲ್ಲದಂತಹ ಸಂದರ್ಭದಲ್ಲಿ work load ಇಲ್ಲದೇ idle ಆಗಿರುವಂಥ ಉಪ-ವಿಭಾಗಗಳನ್ನು ಹಸ್ತಾಂತರ ಮಾಡತಕ್ಕಂಥದ್ದು ಬಹುತೇಕ ಸ್ಥಳಾಂತರ ಮಾಡತಕ್ಕಂಥದ್ದು ಅವತ್ತಿನ ಮಂತ್ರಿಗಳಿಗೆ ಅವತ್ತಿನ ಆಡಳಿತ ಯಂತ್ರ ನಡೆಸತಕ್ಕಂಥವರಿಗೆ ಅದು ಮನವರಿಕೆ ಇರುತ್ತದೆ. ಆ ಒಂದು ದೃಷ್ಟಿಯಿಂದ ಅವತ್ತು ಚನ್ನರಾಯನಪಟ್ಟಣದಲ್ಲಿ ಬಹಳಷ್ಟು ಕಾಮಗಾರಿಗಳು ವಿಶೇಷವಾಗಿ ಬಂದಿದ್ದರಿಂದ ಹಸ್ತಾಂತರವಾಗಿದೆ. ಆದರೆ, ಇವತ್ತು ಇನ್ನು 25 ಕೋಟಿ ರೂಪಾಯಿಯ ಕಾಮಗಾರಿಗಳು ಇದೆ ಎಂದು ಹೇಳಿದರೂ ಸಹ ಆ ಕಾಮಗಾರಿಗಳನ್ನು ಮುಖ್ಯಮಂತ್ರಿಗಳಾದ, ಸರ್ಕಾರ ಬಂದ ಬಂದ ಕೇವಲ 8 ದಿವಸದೊಳಗಾಗಿ ಈ ಎಲ್ಲಾ ಕಾರ್ಯಾಚರಣೆಗಳನ್ನು ಮಾಡುತ್ತಾರೆ ಎಂದರೆ ಅದು ರಾಜಕೀಯ ದುರುದ್ದೇಶ ಎನ್ನುವಂತಹ ಭಾವನೆ ಹಾಸನ ಜಿಲ್ಲೆಯ ಪ್ರತಿಯೊಬ್ಬ ಸಾಮಾನ್ಯ ಜನಗಳಲ್ಲಿ ವ್ಯಕ್ತವಾಗುತ್ತಿದೆ. ಆದುದರಿಂದ 25 ಕೋಟಿ ರೂಪಾಯಿಯ ಕಾಮಗಾರಿಗಳು ಮುಗಿದಮೇಲೆ ಅದನ್ನು ಕರ್ನಾಟಕ ರಾಜ್ಯದಲ್ಲಿ ಎಲ್ಲಿಗೆ ಬೇಕಾದರೂ ಹಸ್ತಾಂತರಿಸಿಕೊಳ್ಳಲಿ, ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಇನ್ನು ಕಾಮಗಾರಿಗಳು ಜೀವಂತವಾಗಿದೆ ಎಂದರೆ, ಆ ಕಾಮಗಾರಿಗಳನ್ನು ಬೇರೆ ಬೇರೆ ಉಪ-ವಿಭಾಗಗಳಿಗೆ ಹಂಚಿಕೆ ಮಾಡಿ, ಅದು ಮಧ್ಯದಲ್ಲಿ disturbance ಮಾಡಿದರೆ ಆ ಕಾಮಗಾರಿಗಳು ಅರ್ಧಕ್ಕೆ ನಿಂತಾಗ ಅದರ ಗುಣಮಟ್ಟ ಏನಾಗುತ್ತದೆ? ಅದನ್ನು ಯಾವ ರೀತಿ ಕಾರ್ಯಗತ ಮಾಡಲಿಕ್ಕೆ ಇಂಜಿನಿಯರುಗಳಿಗೆ ಸಾಧ್ಯವಾಗುತ್ತದೆ ಎಂಬ ಭಾವನೆ ಇಲ್ಲದೆ, ಆ ಕಾಮಗಾರಿಗಳನ್ನು ಎಲ್ಲಾ ಉಪ-ವಿಭಾಗಗಳಿಗೆ ಇವತ್ತು ಹಂಚಿಕೆ ಮಾಡಿರತಕ್ಕಂಥದ್ದು ಸರಿಯಾದ ಕ್ರಮವಲ್ಲ. ಹಿಂದೆ ಶಿವಮೊಗ್ಗದಿಂದ ಹಾಸನಕ್ಕೆ ಹಸ್ತಾಂತರ ಮಾಡಿದರು ಎನ್ನುವುದಕ್ಕೆ ಅಂದಿನ ಪರಿಸ್ಥಿತಿಯಲ್ಲಿ ಅಲ್ಲಿ ಕಾಮಗಾರಿಗಳು ಅಲ್ಲಿ ಇದ್ದವೇ? ವರ್ಕ್ ಲೋಡ್ ಎಷ್ಟಿತ್ತು ಎನ್ನುವ ಮಾಹಿತಿ ಕೊಡಲಿ. ನಾವೇನು ಬೇಡ ಎಂದು ಹೇಳುವುದಿಲ್ಲ. ದುರುದ್ದೇಶದಿಂದ ಏನಾದರೂ ಈ ರೀತಿ ಮಾಡಿದ್ದರೆ ಸರಿಯಲ್ಲ. ಸನ್ಮಾನ್ಯ ರೇವಣ್ಣನವರು ಅವತ್ತು ಲೋಕೋಪಯೋಗಿ ಮಂತ್ರಿಗಳಾಗಿದ್ದ

ಕಾಲದಲ್ಲಿ ಅಲ್ಲಿ ಕೋಟ್ಯಾಂತರ ರೂಪಾಯಿ ಕಾಮಗಾರಿಗಳು ಇದ್ದರೂ ಕೂಡ, ದುರುದ್ದೇಶದಿಂದ ಏನಾದರೂ ಅದನ್ನು ಹಸ್ತಾಂತರ ಮಾಡಿದ್ದರೆ ಅವರು ಆಪಾದಿತರಾಗುತ್ತಾರೆ. ಆದರೆ, ಇವತ್ತು ಇನ್ನೂ 25 ಕೋಟಿ ರೂಪಾಯಿ ಕಾಮಗಾರಿಗಳು ಇರುವಂತಹ ಸಂದರ್ಭದಲ್ಲಿ, ಅದರ ಜೊತೆ ಶಿರಾಡಿಘಾಟ್ National Highway ನಲ್ಲಿ ರಸ್ತೆಗಳು ಹಾಳಾಗಿರುವ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಕಿತ್ತುಹೋಗಿರುವ ರಸ್ತೆಗಳ ನಿರ್ವಹಣೆಗೆ ಒಂದು Sub-division ಮಾಡಿದರೂ ಸಾಲದು. ಇಂತಹ ಸಂದರ್ಭದಲ್ಲಿ ಇದನ್ನು ನೀವು ಹಸ್ತಾಂತರ ಮಾಡಿದ್ದೀರಿ ಎಂದರೆ ಇದು ರಾಜಕೀಯ ದುರುದ್ದೇಶ ಎನ್ನತಕ್ಕಂಥದ್ದು ಸ್ಪಷ್ಟವಾಗಿ ಕಾಣುತ್ತದೆ. ದಯಮಾಡಿ ಆ ಕಾಮಗಾರಿಗಳು ಪೂರ್ಣಗೊಳ್ಳುವವರೆಗೂ ಆ sub-division ಅಲ್ಲೇ ಇರಲಿ. ಮುಖ್ಯಮಂತ್ರಿಗಳು ಅವರ ಜಿಲ್ಲೆಗೆ ಹೊಸದಾಗಿ sub-division ಸೃಷ್ಟಿ ಮಾಡುವಂತಹ ಪರಿಸ್ಥಿತಿ ಅವರಿಗಿದೆ. ಅವರು ಮಾಡಿಕೊಳ್ಳಲಿ. ಅದನ್ನು ಬಿಟ್ಟು, ಈ ದ್ವೇಷದ ರಾಜಕಾರಣ ಮಾಡುವಂತಹ ಭಾವನೆ ಅವರ ಮನಸ್ಸಿನಲ್ಲಿ ಸುಳಿಯುವುದು ಬೇಡ ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) : ಹಿಂದೆ ಏನು ಪದ್ಧತಿ ಇತ್ತು, ಅದನ್ನು ಬದಲಾವಣೆ ಮಾಡಿದವರು ಯಾರು? ಅದರ ಬಗ್ಗೆ ಯೋಚನೆ ಮಾಡಿದ್ದೀರಾ? ಆಗ ನಿಮಗೆ ಅಧಿಕಾರ ಇತ್ತು ಬದಲಾವಣೆ ಮಾಡಬಹುದು, ಈಗ ಅಧಿಕಾರ ಇಲ್ಲದಿರುವಾಗ ಈ ರೀತಿ ಹೇಳುವುದು ಸರಿಯೇ? ಅಧಿಕಾರ ಇದ್ದಾಗ ನಿಮಗೆ ಅವತ್ತು ಯಾವ ರಾಜಕೀಯ ದುರುದ್ದೇಶ ಇತ್ತು? ಆಗ ರಾಜಕೀಯ ದುರುದ್ದೇಶ ಮಾಡಿ ಈಗ ನಮಗೆ ನೀವು ಬುದ್ಧಿವಾದ ಹೇಳುತ್ತಿದ್ದೀರಿ. ನೀವು ಏಕೆ ಅವತ್ತು ಆ ರೀತಿ ಮಾಡಿದಿರಿ ಎಂಬುದನ್ನು ನಮಗೆ ಹೇಳಬೇಕು. 40 ವರ್ಷಗಳ ಹಿಂದೆ ಶಿವಮೊಗ್ಗ ಉಪ-ವಿಭಾಗ ಇತ್ತು. ರಾಜಕೀಯ ದುರುದ್ದೇಶದಿಂದ ಮಾಡಿರತಕ್ಕವರು ನೀವು. ಅದನ್ನು ನಾವು ಈಗ ಸರಿಪಡಿಸಿದ್ದೇವಷ್ಟೆ.

(ಗೊಂದಲ)

ಅಧ್ಯಕ್ಷರು : ಸಿದ್ದುಸಾವದಿಯವರೆ, ರೇಣುಕಾಚಾರ್ಯರವರೆ ಪದೇ ಪದೇ ಏಕೆ ಏಳುತ್ತೀರಿ? ಕುಳಿತುಕೊಳ್ಳಿ.

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಹೆಚ್. ಡಿ. ರೇವಣ್ಣನವರು ಮತ್ತು ಸಹಿ ಮಾಡಿದಂಥವರೆಲ್ಲಾ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. 45 ವರ್ಷಗಳ ಹಿಂದೆ ಸ್ಥಾಪಿತವಾಗಿರುವಂತಹ ನಾಲ್ಕು ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವಂತಹ ಈ sub-divisionನ್ನು ಅಲ್ಲಿಂದ shift ಮಾಡಬೇಕಾದಂತಹ ಅವಶ್ಯಕತೆ ಇರಲಿಲ್ಲವೆಂದು ನಾನು ಮೊದಲೇ ಅವರಿಗೆ ಗೊತ್ತಿರಲಿ ಎಂದು ಹೇಳಿದ್ದೇನೆ. ಆ ರೀತಿ shift ಮಾಡಿರುವುದರಿಂದ ನಾಲ್ಕು ಜಿಲ್ಲೆಗಳಲ್ಲಿ ಕಾಮಗಾರಿಗಳು ಕಡಿಮೆಯಾಗುವುದಕ್ಕೆ ಪ್ರಾರಂಭವಾದವು. Work load ಪ್ರಶ್ನೆ ಬಂದರೆ, workಗಳನ್ನು ಕೊಟ್ಟರೆ ಲೋಡೋ ಕೊಡದಿದ್ದರೆ ಲೋಡೋ ಎನ್ನುವ ಪ್ರಶ್ನೆ ಇಲ್ಲಿ ಬರುತ್ತದೆ. ಇಲ್ಲಿ ಏನಾಗಿದೆ ಎಂದರೆ ಸಂಪೂರ್ಣವಾಗಿ 42-43 ವರ್ಷಗಳ ನಂತರ ಇವರು 2004 ರಲ್ಲಿ ಒಂದು ಆದೇಶ ಮಾಡಿರುತ್ತಾರೆ. ಈ ಆದೇಶಕ್ಕೆ ಏನಾದರೂ ಪ್ರಸ್ತಾವನೆಯನ್ನು

fileನಲ್ಲಿ ಇದ್ದುದ್ದನ್ನು ನಾನು ನಿಮ್ಮ ಹತ್ತಿರ ಚರ್ಚೆ ಮಾಡಿದರೆ ಆಯಿತು ಎಂದು ವಿಚಾರ ಇಟ್ಟುಕೊಂಡು ಆಗ ಮಾತನಾಡಿದೆ. ಅದನ್ನು ತಾವು ಗೌರವಾನ್ವಿತವಾಗಿ ಒಪ್ಪಿಕೊಂಡಿದ್ದರೆ ಅಲ್ಲಿ ನಾನು ಮಾತನಾಡಬಹುದು. ಇಲ್ಲಿ ನಾನು ಈಗ ಓದಿ ಹೇಳಬೇಕಾಗುತ್ತದೆ. ಏಕೆಂದರೆ ಇದರ ಬಗ್ಗೆ ಪ್ರಸ್ತಾವನೆಯೂ ಇಲ್ಲ. ಮಂತ್ರಿಗಳು ಮಾತ್ರ ತೀರ್ಮಾನ ಕೈಗೊಂಡಿದ್ದಾರೆಯೇ ಹೊರತು ಇದರ ಬಗ್ಗೆ ಪ್ರಸ್ತಾವನೆಯೇ ಇಲ್ಲ, ಅಧಿಕಾರಿಗಳು ಯಾರು ಶಿಫಾರಸ್ಸು ಮಾಡಿಲ್ಲ ಎಂಬುದನ್ನು ನಾನು ನಿಮಗೆ ಮೊದಲೇ ಹೇಳಿದೆ. ಇದನ್ನು ನಾನು ಓದಿ ಹೇಳಬೇಕೆಂದರೆ ಓದಿ ಹೇಳುತ್ತೇನೆ. ಇದು ಅವರೇ order ಮಾಡಿರುವಂತಹ fileನಲ್ಲಿ 9 ನೇ ಪುಟದಲ್ಲಿ ಸ್ಪಷ್ಟವಾಗಿದೆ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ, ಏಕೆ intervene ಮಾಡುತ್ತೀರಿ? ರೇವಣ್ಣನವರೆ, ಅವರು complete ಮಾಡಲಿ. ಇದು ಗಮನ ಸೆಳೆಯುವ ಸೂಚನೆ. ಬಹಳ ಚರ್ಚೆಗೆ ಅವಕಾಶವನ್ನು ನಾನು ಕೊಡುವುದಿಲ್ಲ. ಮಾನ್ಯ ಸಚಿವರು ಸ್ಪಷ್ಟೀಕರಣ ಕೊಟ್ಟಿದ್ದಾರೆ. ಪದೇ ಪದೇ ಈ ರೀತಿ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ನಿಯಮ 69ರ ಮೇಲೆ ಚರ್ಚೆ ಮಾಡುವುದಿದ್ದರೆ ಹೆಚ್ಚಿಗೆ ಅವಕಾಶವನ್ನು ಮಾಡಿಕೊಡಬಹುದು. ಒಂದು ಸಲ ನಾನು ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಮಾನ್ಯ ಉದಾಸಿಯವರು ಉತ್ತರವನ್ನು ಕೊಡುತ್ತಾರೆ, ಬೇಕಾದರೆ ನೀವು ಸ್ಪಷ್ಟೀಕರಣವನ್ನು ಕೇಳಿ. ಮೊದಲು ಸಚಿವರು ಉತ್ತರವನ್ನು complete ಮಾಡಲಿ.

ಶ್ರೀ ಸಿ. ಎಂ. ಉದಾಸಿ : ಶಿವಮೊಗ್ಗದಲ್ಲಿ 5 ಕೋಟಿ ರೂ.ಗಳ ಎಲೆಕ್ಟ್ರಿಕಲ್ ಕೆಲಸ ಇರಬಹುದು. ಬೇರ ಎಬೇರೆ ಕಡೆ ಏಳೂವರೆ ಕೋಟಿ ರೂ.ಗಳ ಕೆಲಸ ಇದೆ ಎಂದು ಅವರು ವಿಸ್ತಾರವಾಗಿ ಬರೆದಿದ್ದಾರೆ. ಅದರ ವಿವರಣೆಗೆ ಹೋಗುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ಚನ್ನರಾಯಪಟ್ಟಣದಲ್ಲಿರುವಂಥ 25 ಕೋಟಿ ರೂ.ಗಳ ರಸ್ತೆ ಕೆಲಸಗಳು ಮುಗಿಯುವ ಹಂತದಲ್ಲಿದೆ. ಹೀಗಾಗಿ ಅದನ್ನು ವಿಂಗಡಣೆ ಮಾಡಿ ಕೊಟ್ಟಿರುವುದರಿಂದ ಅದು ಸಮಸ್ಯೆಯಾಗುವುದಿಲ್ಲ. ಮಾನ್ಯ ಸದಸ್ಯರು ಹೇಳುತ್ತಿರುವುದರ ಬಗ್ಗೆ ಇಲ್ಲಿ ನಾನು ಸ್ಪಷ್ಟವಾಗಿ ನೋಡಿದ್ದೇನೆ. ಈ ತೀರ್ಪನ್ನು ಕೈಗೊಳ್ಳಬೇಕಾದ ಪೂರ್ವದಲ್ಲಿ ಎಲ್ಲಿಯಾದರೂ ಅಧಿಕಾರಿಗಳು ಬರೆದಿರಬೇಕಲ್ಲವೇ? ಅಧಿಕಾರಿಗಳು ಎಲ್ಲಿಯೂ ಈ ಸಲಹೆಯನ್ನು ಕೊಟ್ಟಿಲ್ಲ. ಇವರೊಬ್ಬರೇ ಇಲ್ಲಿ ಸಲಹೆಯನ್ನು ಕೊಟ್ಟಿದ್ದಾರೆ. ಚೀಫ್ ಇಂಜಿನೀಯರ್ ಬರೆದಿದ್ದರೊಳಗೆ ಬೇರೆ ಬೇರೆ ಡಿವಿಜನ್‌ಗಳಿಗೆ ನ್ಯಾಷನಲ್ ಹೈವೇ ಸಬ್ ಡಿವಿಷನ್‌ಗಳಿಗೆ ಸಂಬಂಧಿಸಿದಂತೆ ಹೇಳಿದ್ದಾರೆಯೇ ಹೊರತೂ, ಇವರು ಅದರ ತೀರ್ಮಾನಕ್ಕೆ ಬರುತ್ತಾರೆ. It should not be under the control of the Executive Engineer of the Division who maintains the construction of roads but they should be directly reporting to the Chief Engineer. ಹೀಗೆ ಬರೆದು, ಎಲ್ಲಿಯೂ ಈ ಸಬ್-ಡಿವಿಷನ್ ಬಗ್ಗೆ ಬರೆಯಲಿಲ್ಲ. ಆ ಫೈಲ್‌ನಲ್ಲಿ ಇವರು ಒಂದು ಆಜ್ಞೆಯನ್ನು ಮಾಡುತ್ತಾರೆ. ಆಜ್ಞೆ

ಮಾಡಿರುವುದರಲ್ಲಿ ಇವರು ಏನು ಬರೆದಿದ್ದಾರೆಂದರೆ, ಕೇಂದ್ರ ರಸ್ತೆ ನಿಧಿಯಿಂದ ಮಾಡಿರುವ IRDF ಯೋಜನೆ ಹಾಗೂ ಸರ್ಕಾರದ ಅನುದಾನದಿಂದ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯು ಕೈಗೊಳ್ಳುತ್ತಿದೆ. 2006 ನೇ ಇಸವಿಯಲ್ಲಿ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳದ ಭಗವಾನ್ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕವಿದೆ, ಅದರ ಅಭಿವೃದ್ಧಿಗೆ ಬೇಕಾಗಿ ಈ ಸಬ್ ಡಿವಿಷನ್ ಶಿಫ್ಟ್ ಮಾಡಬೇಕಾಗಿದೆ. ಇದನ್ನು ಶಿಫ್ಟ್ ಮಾಡಬೇಕೆಂದು ತಿಳಿದುಕೊಂಡು ಯಾರು ಸಲಹೆಯನ್ನು ಮಾಡಿಲ್ಲ. ಇದನ್ನು ಇವರು ಸುಮೋಟೋ ಮಾಡಿರಬೇಕಾದಾಗ ಇವತ್ತು ಅವಶ್ಯಕತೆಗೆ ಅನುಗುಣವಾಗಿ ಅವರು ಏಕೆ ಮಾಡಿದರು ಎನ್ನುವುದರ ಬಗ್ಗೆ ಮತ್ತು ಯಾವ ಉದ್ದೇಶಕ್ಕೆ ಮಾಡಿದರು ಎನ್ನುವ ಬಗ್ಗೆ ನಾವು ಅವರ ಮೇಲೆ ಆರೋಪ ಮಾಡುವುದಕ್ಕೆ ಇಚ್ಛಿಪಡುವುದಿಲ್ಲ. ಅವರು ಇವತ್ತು ಆರೋಪ ಮಾಡಬೇಕಾದಾಗ ಅದು ಸತ್ಯಕ್ಕೆ ದೂರವಾದಂಥ ಆರೋಪವನ್ನು ಮಾಡುತ್ತಿದ್ದಾರೆ. ನ್ಯಾಯ ಸಮ್ಮತವಾಗಿ ಬೇಕಾಗಿರುವಂಥ ಕೆಲಸ ಕಾರ್ಯಗಳನ್ನು 4 ಜಿಲ್ಲೆಗಳ ಅಭಿವೃದ್ಧಿಗೆ ಬೇಕಾಗಿರುವಂಥ ಸಬ್ ಡಿವಿಷನ್ ವರ್ಗಾವಣೆ ಮಾಡಿದೆ, ಅದಕ್ಕೆ ದಯವಿಟ್ಟು ಅವರು ಸಹಕರಿಸಬೇಕು. ಈ ಹೆಚ್ಚು ಕಾಮಗಾರಿಗಳನ್ನು ಮಾಡಬೇಕಾದಾಗ ಈಗ ನಾವು ನೋಡಿರಬಹುದು. ಅವರು 7 ಜನ Assistant Executive Engineer ಗಳನ್ನು ಇಟ್ಟುಕೊಂಡಿದ್ದಾರೆಂದರೆ, ಉಳಿದ ಕಡೆ ಅವರು ಅದೇ ರೀತಿ ಹಾಸನ ಜಿಲ್ಲೆಯಲ್ಲಿ ಏಕೆ ಇಟ್ಟಿಲ್ಲ ಎಂದು ನಾವು ಕೇಳುವುದು ಸಾಧುವಾದುದು ಅಲ್ಲ. ಅಲ್ಲಿ ಅವರು ಹೆಚ್ಚು ಕಾಮಗಾರಿಗಳನ್ನು ತೆಗೆದುಕೊಂಡಿರಬಹುದು, 7 Assistant Executive Engineer ಗಳನ್ನು ಅವರು ಇಟ್ಟುಕೊಂಡಿರಬಹುದು. ಬೇರೆ ಕಡೆ ಮೂರೇ ಇರಬಹುದು, ಹೌದು, ಅಲ್ಲಿ 7 ಜನ Assistant Executive Engineer ಬಗ್ಗೆ ಇಲ್ಲಿದೆ. ಆ ದಾಖಲೆಗಳ ಬಗ್ಗೆ ನಾನು ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ಈ ವಿಷಯದ ಬಗ್ಗೆ ಚರ್ಚೆ ಈಗ ಸಾಕು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಅವರು ಹೇಳುವುದು ಅಲ್ಲ, ನಾನು ದಾಖಲೆ ಸಮೇತ ಹೇಳುತ್ತೇನೆ. ಮಾನ್ಯ ಸಚಿವರು ದಯಮಾಡಿ ಕುಳಿತುಕೊಳ್ಳಬೇಕು. ನನಗೂ ಅವಕಾಶವನ್ನು ಕೊಡಿ. ಅವರಿಗೆ ಅವಕಾಶವನ್ನು ಕೊಟ್ಟಿರುತ್ತೀರಿ.

(ಗೊಂದಲ)

ಅಧ್ಯಕ್ಷರು : ಏನೇನು ದಾಖಲೆಗಳು ಇವೆ, ಅವುಗಳನ್ನು ತೆಗೆದುಕೊಂಡು ಅವರು ನೀವು ಇಬ್ಬರೂ ಬನ್ನಿ, ಇದರ ಬಗ್ಗೆ ನಮ್ಮ ಚೇಂಬರ್‌ನಲ್ಲಿ ಕುಳಿತು ಚರ್ಚೆಯನ್ನು ಮಾಡೋಣ. ಮಾನ್ಯ ರೇವಣ್ಣನವರೆ, ನಿಮಗೆ ನಾನು ಸಾಕಷ್ಟು ಅವಕಾಶವನ್ನು ಕೊಟ್ಟಿರುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸರ್, ಮಾನ್ಯ ಸಚಿವರು ಉತ್ತರವನ್ನು ಹೇಳಿ ಮುಗಿಸಿಬಿಡಲಿ.

(ಗೊಂದಲ)

ಅಧ್ಯಕ್ಷರು : ಅವರು complete ಮಾಡಲಿ, ನಿಮಗೆ ಸ್ಪಷ್ಟೀಕರಣ ಕೊಟ್ಟಿರುತ್ತಾರೆ. ಇದನ್ನು ಇಲ್ಲಿಗೆ ಮುಕ್ತಾಯಗೊಳಿಸೋಣ. ಆಯಿತು, ಇದು ಗಮನ ಸೆಳೆಯುವ ಸೂಚನೆ. ಎಷ್ಟೊಂದು ಅವಕಾಶವನ್ನು ಕೊಡಬೇಕು? ಇನ್ನೊಂದು ಲಾಸ್ಟ್ ಸ್ಪಷ್ಟೀಕರಣ ಕೇಳಿ, ಈ ವಿಷಯವನ್ನು ಮುಗಿಸೋಣ. ಮತ್ತೆ ಹೆಚ್ಚಿಗೆ ಚರ್ಚೆ ಮಾಡುವುದು ಇದ್ದರೆ ನನ್ನ ಚೇಂಬರ್‌ಗೆ ಬನ್ನಿ. ಅವರು ಪೇಪರ್ಸ್ ತೆಗೆದುಕೊಂಡು ಬರಲಿ, ನೀವೂ ತೆಗೆದುಕೊಂಡು ಬನ್ನಿ. ಎಲ್ಲವನ್ನೂ ಇಲ್ಲಿಯೇ ಚರ್ಚೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಎರಡೇ ನಿಮಿಷ, ಅವರು ಹೇಳಿದ್ದಕ್ಕೆ ನಾನು ಹೇಳಬೇಕಾಗುತ್ತದೆ. ಹೊಳೆನರಸೀಪುರ ಸಬ್ ಡಿವಿಷನ್‌ಗೆ, 7 ಜನ Assistant Executive Engineer.. ಮಾನ್ಯ ಸಚಿವರು ಎರಡು ನಿಮಿಷ ನಾನು ಹೇಳುವವರೆಗೆ ಕೇಳಬೇಕು.

ಅಧ್ಯಕ್ಷರು : ರೇಣುಕಾಚಾರ್ಯರವರೆ, ನೀವು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಸರ್, ಒಂದು ನಿಮಿಷ ಹೇಳುತ್ತೇನೆ. ಅವರು ಹೊಳೆನರಸೀಪುರ ಸಬ್ ಡಿವಿಷನ್‌ಗೆ 7 ಜನ Assistant Executive Engineer ಎಂದು ಹೇಳಿದ್ದಾರೆ. ಈ ಸಬ್ ಡಿವಿಷನ್‌ನಲ್ಲಿ ವರ್ಷಕ್ಕೆ ಮುಂಚೆ ಎಷ್ಟು ಜನ ಇಂಜಿನಿಯರ್‌ಗಳು ಇದ್ದರು ಎನ್ನುವುದರ ಬಗ್ಗೆ ದಯಮಾಡಿ ಸಭೆಗೆ ಹೇಳಲಿ. ಇಡೀ ರಾಜ್ಯದಲ್ಲಿ ಸಾವಿರ ಪೋಸ್ಟ್‌ಗಳನ್ನು ನಾನು ಯಾವ್ಯಾವ ಸಬ್ ಡಿವಿಷನ್‌ಗೆ ಎಷ್ಟೆಷ್ಟು ಇರಬೇಕು, ಡಿವಿಷನ್, ಸರ್ಕಲ್, ಸಿ.ಇ. ಆಫೀಸ್‌ಗೆ ಎಂದು ನಿಗದಿ ಮಾಡಿದಂಥವನು ನಾನು. 20 ವರ್ಷ ರೆಕ್ರೂಟ್‌ಮೆಂಟ್ ಮಾಡಿರಲಿಲ್ಲ. ದಯಮಾಡಿ ಹೇಳುತ್ತೇನೆ, 20 ವರ್ಷ ಯಾವ್ಯಾವ ಸಬ್ ಡಿವಿಷನ್‌ಗೆ ಏನೇನು ಬೇಕು, ಸರ್ಕಲ್ ಆಫೀಸಿಗೆ ಏನೇನು ಬೇಕು, Technical Assistant ಎಷ್ಟು ಬೇಕು, ಏನು ಬೇಕು ಎಂದು ನಾನು ಮಾಡಿರುವುದು. ಸ್ವಲ್ಪ ನಾನು ಮಾತನಾಡುವವರೆಗೆ ಇರಬೇಕು. ಬೇರೆ ದುರುದ್ದೇಶಕ್ಕೆ ತೆಗೆದುಕೊಂಡು ಹೋಗಿದ್ದರೆ ಅದರ ಬಗ್ಗೆ ನಾನು ಹೇಳುತ್ತೇನೆ. ಇಡೀ ರಾಜ್ಯದಲ್ಲಿ ಒಂದು ಸಾವಿರ ಪೋಸ್ಟ್‌ನ್ನು ಕ್ರಿಯೇಟ್ ಮಾಡಿರುತ್ತೇನೆ. ದಯಮಾಡಿ ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ಈ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಿದ್ದೇನೆ. ಅವರು ಸರ್ಕಾರದಿಂದ ಉತ್ತರವನ್ನು ಕೊಟ್ಟಿದ್ದಾರೆ, ನೀವು ಸ್ಪಷ್ಟೀಕರಣವನ್ನು ಕೇಳಿರುತ್ತೀರಿ.

ಶ್ರೀ ಹೆಚ್.ಡಿ. ರೇವಣ್ಣ : 7 ಜನ Assistant Executive Engineer ಎಂದು ಹೇಗೆ ಹೇಳುತ್ತೀರಿ?

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆ...

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನಾನು ಆಯ್ಕೆ ಮಾಡಿರುವುದನ್ನು ಹೇಳುತ್ತಿಲ್ಲ.

ಅಧ್ಯಕ್ಷರು : ಸಾಕು, ಈ ವಿಷಯದ ಬಗ್ಗೆ ಚರ್ಚೆಯನ್ನು ಮುಕ್ತಾಯಗೊಳಿಸಿದ್ದೇನೆ. ಮುಂದೆ ವಿತ್ತೀಯ ಕಾರ್ಯಕಲಾಪದ ಬಗ್ಗೆ ಚರ್ಚೆಯನ್ನು ನಾವು ಪ್ರಾರಂಭ ಮಾಡೋಣ. ಈ ವಿಷಯವನ್ನು ಮುಕ್ತಾಯಗೊಳಿಸಿದ್ದೇನೆ. ರೇವಣ್ಣನವರೆ, ಈ ವಿಷಯಕ್ಕೆ ಚರ್ಚೆ ಸಾಕು. ನಾನು ಸದಸ್ಯರ ಗಮನವನ್ನು ಸೆಳೆಯುತ್ತಿದ್ದೇನೆ. ಇದು ಕಾಲಿಂಗ್ ಅಟೆನ್‌ಷನ್. ಈ ರೀತಿ ನೀವು ಮಾಡುವುದಾದರೆ ಸರಿಯಲ್ಲ, ನಾನು ಸದನವನ್ನು ಹೇಗೆ ನಡೆಸಬೇಕು? ಎಲ್ಲದಕ್ಕೂ ನಿಮಗೆ ಇದೇ ರೀತಿ ಉತ್ತರವನ್ನು ಕೊಡಬೇಕೆಂದರೆ ಆಗುವುದಿಲ್ಲ. ನೀವು ಧರಣಿ ಮಾಡುವ ಅವಶ್ಯಕತೆ ಇಲ್ಲ.

(ಈ ಹಂತದಲ್ಲಿ ಜೆಡಿ(ಎಸ್) ಸದಸ್ಯರುಗಳು ಬಾವಿಗೆ ಬಂದರು)

ಇದು ಗಮನ ಸೆಳೆಯುವ ಸೂಚನೆ. ಅಪ್ಪಚ್ಚುರಂಜನ್ ನಾನು ಹೇಳುತ್ತೇನೆ, ನೀವು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಅವರು ಹೇಳುವವರೆಗೆ ನಾನು ಸುಮ್ಮನೆ ಇದ್ದೆ, ನಾನು ಹೇಳುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು : ಇದನ್ನು ನೀವು ನಿಯಮ 69 ರಲ್ಲಿ ಕಳುಹಿಸಿಕೊಡಿ. ಡಿಟೇಲ್ ಆಗಿ ಚರ್ಚೆಯನ್ನು ಮಾಡೋಣ. ಗಮನ ಸೆಳೆಯುವ ಸೂಚನೆಯಲ್ಲಿ ನಾನು ಅವಕಾಶವನ್ನು ಕೊಟ್ಟರೆ ಮಾತ್ರ ನೀವು ಸ್ಪಷ್ಟೀಕರಣವನ್ನು ಕೇಳಬಹುದು. ಇದರಲ್ಲಿ ಇಷ್ಟೊಂದು ಡಿಟೇಲ್ ಆಗಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಅವರು ಉತ್ತರವನ್ನು ಕೊಟ್ಟಿದ್ದಾರೆ, ನೀವು ಸ್ಪಷ್ಟೀಕರಣವನ್ನು ಕೇಳಿದ್ದೀರಿ, ಮತ್ತೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಪದೇ ಪದೇ ಇದನ್ನು ಚರ್ಚೆ ಮಾಡುವಂಥ ಅವಶ್ಯಕತೆಯಿಲ್ಲ. ಬೇರೆ ರೀತಿಯಲ್ಲಿ ಇದಕ್ಕೆ ನೀವು ಅವಕಾಶವನ್ನು ಕೇಳಿ ನೋಟೀಸ್ ಕೊಟ್ಟರೆ ನಾನು ಅವಕಾಶವನ್ನು ಕೊಡುತ್ತೇನೆ. ಇದೇ ಒಂದು ವಿಷಯಕ್ಕೆ ಇಡೀ ಸದನದಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನೀವು ಅದನ್ನೇ ಹೇಳುವುದು, ಅವರೂ ಅದನ್ನೇ ಹೇಳುವುದು. ಮಾನ್ಯ ಉದಾಸಿಯವರೆ, ಕೊನೆಯದಾಗಿ ಹೇಳಿಬಿಡಿ. ಮಾನ್ಯ ಅಪ್ಪಚ್ಚುರಂಜನ್‌ರವರೆ ನೀವು ಸುಮ್ಮನೆ ಇರಿ.

ಶ್ರೀ ಸಿ. ಎಂ. ಉದಾಸಿ : ನೀವು ಒಂದು ಸಮಯವನ್ನು ಗೊತ್ತುಮಾಡಬಹುದು. ಸನ್ಮಾನ್ಯ ರೇವಣ್ಣನವರು ಮತ್ತು ನಾನು ಮತ್ತು ಸಹಿ ಮಾಡಿದ ಎಲ್ಲಾ ಮಾನ್ಯ ಸದಸ್ಯರುಗಳು ಬರಲಿ.

ಅಧ್ಯಕ್ಷರು : ಇದರ ಬಗ್ಗೆ ಮತ್ತೆ ಡಿಟೇಲ್ ಆಗಿ ಚರ್ಚೆ ಮಾಡುವ ಅವಶ್ಯಕತೆ ಇದ್ದರೆ ನೀವು ಬೇರೆ ನೋಟೀಸ್ ಕೊಡಿ. ನಾನು ಅವಕಾಶವನ್ನು ಕೊಡುತ್ತೇನೆ. ಇದು ಗಮನ ಸೆಳೆಯುವ ಸೂಚನೆ. ನಿಯಮ 73 ರ ಪ್ರಕಾರ ಇವತ್ತು ಹೇಳಿಕೆಯನ್ನು ನೀಡಲಾದ ಕಾಲದಲ್ಲಿ ಅಂತಹ ಹೇಳಿಕೆಯ ಮೇಲೆ ಯಾವ ಚರ್ಚೆಯನ್ನು ಮಾಡತಕ್ಕದ್ದಲ್ಲ. ಇದು ಗಮನ ಸೆಳೆಯುವ ಸೂಚನೆ ಇರುವುದರಿಂದ ಇದಕ್ಕೆ ನಿರ್ದಿಷ್ಟವಾದ ಕಾಲಾವಧಿ ಇದೆ. ಅವರು ಉತ್ತರವನ್ನು ಕೊಟ್ಟಮೇಲೆ ಒಂದು ಸ್ಪಷ್ಟೀಕರಣ ಕೇಳುವುದಕ್ಕೆ ನಾನು ಅವಕಾಶ ಕೊಟ್ಟರೆ ಮಾತ್ರ ಕೇಳಬಹುದು. ಈಗ ನೀವು ಸ್ಪಷ್ಟೀಕರಣವನ್ನು ಕೇಳಿದ್ದೀರಿ. ಅದಕ್ಕೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ನೀವು ಸಮಾಧಾನವಾಗದಿದ್ದರೆ ಬೇರೆ ರೀತಿಯಲ್ಲಿ ನೋಟೀಸ್‌ನ್ನು ಕೊಡಿ. ರೂಲ್ 69 ನಲ್ಲಿ

ಕೊಡಿ. ಡಿಟೇಲ್ ಆಗಿ ಚರ್ಚೆಯನ್ನು ಮಾಡೋಣ. ಇಲ್ಲಿಗೆ ನಾನು ಈ ವಿಷಯವನ್ನು ಮುಕ್ತಾಯಗೊಳಿಸಿದ್ದೇನೆ. ಮುಂದಿನ ಚರ್ಚೆಗೆ ನಾನು ಅವಕಾಶವನ್ನು ಕೊಡುತ್ತೇನೆ. ವಿತ್ತೀಯ ಕಾರ್ಯಕಲಾಪಗಳು ಪ್ರಾರಂಭವಾಗಬೇಕು. ಮಾನ್ಯ ಸಿದ್ಧರಾಮಯ್ಯನವರು.

ಶ್ರೀ ಸಿದ್ಧರಾಮಯ್ಯನವರು : ಆರ್ಡರ್‌ನಲ್ಲಿ ಇಲ್ಲವಲ್ಲ.

ಅಧ್ಯಕ್ಷರು : ಮಾಡಿಸುತ್ತೇನೆ, ನಡೆಯಿರಿ. ಮಾನ್ಯ ಜೆಡಿ(ಎಸ್) ಸದಸ್ಯರು ನಿಮ್ಮ ಸ್ಥಾನಕ್ಕೆ ಹೋಗಿ. ಈ ರೀತಿ ಧರಣಿ ಮಾಡುವುದು ಸರಿಯಲ್ಲ. ಇದರ ಬಗ್ಗೆ ನಾನು ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ನೀವು ಬೇರೆ ರೀತಿಯ ನೋಟೀಸ್ ಕೊಡಿ. ಇದಕ್ಕೆ ಇನ್ನು ಹೆಚ್ಚಿನ ಚರ್ಚೆಗೆ ಅವಕಾಶವನ್ನು ನಾನು ಮಾಡಿ ಕೊಡುತ್ತೇನೆ. ರೂಲ್ 69 ರಲ್ಲಿ ಕೊಡಿ. ನಾನು ಅವಕಾಶವನ್ನು ಕೊಡುತ್ತೇನೆ. ಗಮನ ಸೆಳೆಯುವ ಸೂಚನೆ ಬಗ್ಗೆ ನೀವು ಇದೇ ರೀತಿ ಚರ್ಚೆ ಮಾಡುವುದಾದರೆ ನಾನು ಸದನವನ್ನು ನಡೆಸುವುದಕ್ಕಾಗುವುದಿಲ್ಲ. ನೀವು ಈಗ ಒಂದು ಸ್ಪಷ್ಟೀಕರಣವನ್ನು ಕೇಳಿ. ಆಯಿತು ಎಲ್ಲರೂ ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರು, ಆ sub-divisionನ್ನು ತೆಗೆಯಬೇಕಾದರೆ, ಯಾರದೇ ಪ್ರಸ್ತಾವನೆ ಇಲ್ಲದೆ ತೆಗೆದಿದ್ದಾರೆಂದು ಒಂದು ಮೆಸೇಜ್‌ನ್ನು ಕೊಟ್ಟರು. ಇವತ್ತು ಈ sub-divisionನ್ನು ತೆಗೆಯಬೇಕಾದರೆ, ಇದರ ಬಗ್ಗೆ ಯಾರ ಪ್ರಸ್ತಾವನೆ ಇತ್ತೆಂದು ತಾವು ದಯಮಾಡಿ ಹೇಳಬೇಕು. Chief Engineerರವರು ಪ್ರಸ್ತಾವನೆ ಏನಿದೆ ಎಂದು ಸಭೆಯ ಮುಂದೆ ಓದುವುದಕ್ಕೆ ತಾವು ದಯಮಾಡಿ ಹೇಳಬೇಕು. Chief Engineer ರವರು ಏನು ಹೇಳಿದ್ದಾರೆ. ನಾನು ಈ ಬಗ್ಗೆ ಒಂದು ನಿಮಿಷ ಹೇಳುತ್ತೇನೆ. ತಾವು ಸಭೆಯನ್ನು ಬೇರೆ ದಾರಿಗೆ ತರುವುದಕ್ಕೆ ಹೋಗಬೇಡಿ.

ಅಧ್ಯಕ್ಷರು : ಮಾನ್ಯ ಸಚಿವರು ಇದರ ಬಗ್ಗೆ ಸ್ಪಷ್ಟೀಕರಣವನ್ನು ಹೇಳುತ್ತಾರೆ. ಲಾಸ್ಟ್‌ನಲ್ಲಿ ತಮಗೆ ಅವಕಾಶವನ್ನು ಮಾಡಿಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಈ sub-divisionನ್ನು ಶಿವಮೊಗ್ಗದಲ್ಲಿ ತೆರೆಯುವುದಕ್ಕೆ ಇದರಲ್ಲಿ ಯಾರ ಪ್ರಸ್ತಾವನೆ ಏನಿದೆ? ಚನ್ನರಾಯಪಟ್ಟಣ sub-divisionನ್ನು ತೆಗೆಯಬೇಕೆಂದು ಏನಾದರೂ ಪ್ರಸ್ತಾವನೆ ಇದೆಯೇ? ಇಲ್ಲದಿದ್ದರೆ ತೆಗೆಯಿರಿ, ಬೇಕಾದರೆ ತಾವು ಇದನ್ನು ಓದಿ.

ಶ್ರೀ ಎಂ. ಶ್ರೀನಿವಾಸ : ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು : ಮಾನ್ಯ ಶ್ರೀನಿವಾಸ್‌ರವರೆ, ಅವರು ಉತ್ತರವನ್ನು ಹೇಳುತ್ತಾರೆ, ತಾವು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಶ್ರೀನಿವಾಸ್‌ರವರಿಗೆ ಜಮೀನಿಗೆ ಬೇಲಿ ಹಾಕುವುದರ ಬಗ್ಗೆ ಗೊತ್ತಿದೆಯೇ ಹೊರತೂ ಸಬ್ ಡಿವಿಜನ್ ವಿಷಯ ಎಂದರೆ ಅವರಿಗೆ ಏನು ಗೊತ್ತಿದೆ?

ಅಧ್ಯಕ್ಷರು : ಮಾನ್ಯ ಉದಾಸಿಯವರೆ, ತಾವು ಕೊನೆಯದಾಗಿ ಹೇಳಿಬಿಡಿ. ಸದನದ ಬಾವಿಯಲ್ಲಿರುವ ಸದಸ್ಯರು ತಾವುಗಳು ದಯಮಾಡಿ ತಮ್ಮ ಸ್ಥಾನಗಳಿಗೆ ತೆರಳಿ. ಮಾನ್ಯ ಬಾಲಕೃಷ್ಣರವರೆ, ತಾವು ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಸಿ. ಎಂ. ಉದಾಸಿ : ನಾನು ಸನ್ಮಾನ್ಯ ರೇವಣ್ಣನವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 45 ವರ್ಷಗಳಿಂದ ಸ್ಥಾಪಿತವಾಗಿರುವಂತಹ ನಿರಂತರವಾಗಿ ನಡೆಯುತ್ತಿರುವಂತಹ sub-division ನ್ನು ವರ್ಗಾವಣೆ ಮಾಡಬೇಕಾಗಿರುವಂತಹ...

ಅಧ್ಯಕ್ಷರು : ಈ ಒಂದು ವಿಯದ ಬಗ್ಗೆ ಇಷ್ಟೊಂದು ಸಮಯವನ್ನು ತೆಗೆದುಕೊಳ್ಳುವಂತಹ ಅವಶ್ಯಕತೆ ಇಲ್ಲ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಕಷ್ಟು ಸಮಯವನ್ನು ಕೊಟ್ಟಿದ್ದೇನೆ. ಪದೇ ಪದೇ ಅದೇ ವಿಷಯವನ್ನು ಪ್ರಸ್ತಾಪ ಮಾಡುವುದರಲ್ಲಿ ಏನೂ ಅರ್ಥವಿಲ್ಲ. ತಾವು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೀರಿ. ರೂಲ್ 69 ರ ಪ್ರಕಾರ ತಾವು ನೋಟೀಸ್‌ನ್ನು ಕೊಡಿ, ಇದರ ಬಗ್ಗೆ ಇನ್ನು ಹೆಚ್ಚಿನ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಸದನದ ಮುಂದಿನ ಕಾರ್ಯಕಲಾಪಗಳಿಗೆ ತಾವು ಅಡ್ಡಿ ಮಾಡಬಾರದು, ಅದು ಸಾಧ್ಯವಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಇದನ್ನು ದುರುದ್ದೇಶದಿಂದ ಮಾಡುತ್ತಿದ್ದಾರೆಯೇ ಹೊರತು,....

ಅಧ್ಯಕ್ಷರು : ಇದನ್ನು ತಾವು ಹೇಳಿದ್ದೀರಲ್ಲಾ, ತಾವು ಹೇಳಿದ್ದೀರಿ, ಅವರು ನಿರ್ಣಯವನ್ನು ಕೈಗೊಂಡಿದ್ದಾರೆ. ಮತ್ತೆ ತಾವು ಇದರ ಬಗ್ಗೆ ಹೆಚ್ಚಿಗೆ ಚರ್ಚೆ ಮಾಡುವುದಾದರೆ ರೂಲ್ 69 ಪ್ರಕಾರ ತಾವು ನೋಟೀಸ್‌ನ್ನು ಕೊಡಿ.

ಶ್ರೀ ಸಿ. ಎಂ. ಉದಾಸಿ : ಅವರು ಯಾವ ಉದ್ದೇಶದಿಂದ ಮಾಡಿದರು ಎಂದು ಅವರಿಗೆ ಗೊತ್ತಾಗಿದೆ.

ಅಧ್ಯಕ್ಷರು : ಮತ್ತೆ ನಾನು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ಅವಕಾಶವನ್ನು ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ತಾವು ತಮ್ಮ ಕಛೇರಿಗೆ ಕರೆಸಬೇಕು.

ಅಧ್ಯಕ್ಷರು : ಮಾನ್ಯ ಸದಸ್ಯರುಗಳು ತಾವು ತಮ್ಮ ಸ್ಥಾನಗಳಿಗೆ ದಯಮಾಡಿ ಹೋಗಿ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಜೆಡಿಎಸ್ ಪಕ್ಷದ ಸದಸ್ಯರುಗಳು ತಮ್ಮ ಗಳ ಸ್ಥಾನಗಳಿಗೆ ಹೋದರು)

ಅಧ್ಯಕ್ಷರು : ಈ ವಿಷಯದ ಬಗ್ಗೆ ಚರ್ಚೆಯನ್ನು ನಾನು ಮುಕ್ತಾಯಗೊಳಿಸಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ಇದರ ಬಗ್ಗೆ ತಾವು ಏನು ತೀರ್ಮಾನ ಮಾಡಿದ್ದೀರಿ?

ಅಧ್ಯಕ್ಷರು : ತಾವು ರೂಲ್ 69 ರ ಮೇರೆ ಕೊಡಿ. ನಾನು ಇದರ ಬಗ್ಗೆ ಹೆಚ್ಚಿನ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಓಕೆ ಸಾರ್.

ಅಧ್ಯಕ್ಷರು : ಈಗ ಮುಂದಿನ ಕಾರ್ಯಕಲಾಪ, ವಿತ್ತೀಯ ಕಾರ್ಯಕಲಾಪಗಳು, 2008-09 ನೇ

ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ, ಈ ಬಗ್ಗೆ ಮಾನ್ಯ ಸಿದ್ಧರಾಮಯ್ಯನವರು, ತಾವು ಮುಂದುವರೆಸಬೇಕು.

ಶ್ರೀ ಸಿದ್ಧರಾಮಯ್ಯ (ವರುಣಾ) : ಮಾನ್ಯ ಅಧ್ಯಕ್ಷರೇ, ಈಗ 1.30 ಗಂಟೆಯಾಗುತ್ತಾ ಬಂದಿದೆ. ನಾನು ಚರ್ಚೆ ಮಾಡುತ್ತಿರುವುದನ್ನು ಮಧ್ಯದಲ್ಲಿ ನಿಲ್ಲಿಸಬೇಕಾಗುತ್ತದೆ. ನಾನು ಚರ್ಚೆಯನ್ನು ಮಧ್ಯದಲ್ಲಿ ಮತ್ತೆ ಶುರು ಮಾಡುವುದು ಸರಿಯಾಗುವುದಿಲ್ಲ. 2.30 ಗಂಟೆ ಲಂಚ್ ಆದ ಮೇಲೆ ಪ್ರಾರಂಭ ಮಾಡಬಹುದಲ್ಲವೇ? ತಾವು 2.30 ಗಂಟೆಗೆ ಅವಕಾಶ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು : ಈಗ ಸದನವನ್ನು ಮಧ್ಯಾಹ್ನ 2.30 ಗಂಟೆಯವರೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನ ವಿರಾಮಕ್ಕಾಗಿ 1 ಗಂಟೆ 22 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 2.30 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ 2 ಗಂಟೆ 42 ನಿಮಿಷಗಳಿಗೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

4. ವಿತ್ತೀಯ ಕಾರ್ಯಕಲಾಪಗಳು

2008-09ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಸಿದ್ಧರಾಮಯ್ಯ (ವರುಣ) : ಮಾನ್ಯ ಅಧ್ಯಕ್ಷರೇ, ಕಳೆದ ಬಾರಿ ಮಾನ್ಯ ಯಡಿಯೂರಪ್ಪನವರು ಮುಂಗಡ ಪತ್ರವನ್ನು ಮಂಡಿಸಿದಾಗ ಮಾನ್ಯ ದೇಶಪಾಂಡೆಯವರು ಇಲ್ಲಿದ್ದರು. ಆಗ ಅವರು ಕಾನೂನುಪ್ರಕಾರವಾಗಿ ಒಂದು ತಕರಾರನ್ನು ಪ್ರಸ್ತಾಪಿಸಿದರು. ಅದು ಏನೆಂದರೆ, ಆಯವ್ಯಯ ಮಂಡಿಸುವಾಗಲೇ Fiscal Responsibility Act Section 3 ರ ಪ್ರಕಾರ ಸರ್ಕಾರದ ಮೇಲೆ mandatory obligation ಇದೆ. It is mandatory provision. Along with the budget ಎರಡು documents ಗಳನ್ನು ಸರ್ಕಾರದವರು ಮಂಡಿಸಬೇಕು. ಪ್ರತಿ ವರ್ಷ ಬಜೆಟ್ ಮಂಡಿಸಿದಾಗ medium term fiscal plan ಅನ್ನು along with the budget ಮಂಡಿಸಬೇಕು. ಎರಡನೆಯದಾಗಿ, Fiscal Responsibility Actನಲ್ಲಿ ಬಹಳ ಸ್ಪಷ್ಟವಾಗಿ ಹೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಸಾರಿ ಕೂಡ ಅವರು ಅದೇ ತಪ್ಪನ್ನು ಮಾಡಿದ್ದಾರೆ. 17 ನೇ ತಾರೀಖು medium term fiscal plan ಅನ್ನು ಅವರು ಮಂಡಿಸಲಿಲ್ಲ. ಬಜೆಟ್ ಜೊತೆಗೇ ಅದು ಬರಲಿಲ್ಲ. ನಾವು Fiscal Responsibility Act ಅನ್ನು ರಾಜ್ಯದಲ್ಲಿ ಆರ್ಥಿಕ ಸುಧಾರಣೆಗಳನ್ನು ತರಬೇಕು, ರಾಜ್ಯದ ಆರ್ಥಿಕತೆಗೆ ಒಂದು ಸ್ಥಿರತೆ ಇರಬೇಕು, ಕರ್ನಾಟಕದಲ್ಲಿ ಮತ್ತೆ 2001 ರಿಂದ 2004 ರವರೆಗೆ ಇದ್ದಂತಹ ಪರಿಸ್ಥಿತಿ ಮರುಕಳಿಸಬಾರದು, ರಾಜ್ಯದ ಆರ್ಥಿಕ ಪರಿಸ್ಥಿತಿ ಸದೃಢವಾಗಿ, ಆರೋಗ್ಯವಾಗಿ ಇರಬೇಕು, ಹಾಗಿದ್ದಾಗ ಮಾತ್ರ ರಾಜ್ಯದ ಬೆಳವಣಿಗೆಯಾಗುತ್ತದೆ ಎಂಬ ಉದ್ದೇಶದಿಂದ pass ಮಾಡಲಾಗಿತ್ತು. ಮಾನ್ಯ